ಪಾತ್ರ ವರ್ಗ

ದೇವೇಂದ್ರ
ಅಗ್ನಿ
ಯಮ
ನಾಡೀ ಜಂಘ
ವಜ್ರದಂತ
ಭಂಡಾಸುರ
ಮುರಾಸುರ
ಮುನಿಗಳು
ವಿಷ್ಣು ದೂತರು

ಏಕಾದಶಿ ದೇವಿ
ಶ್ರೀ ವಿಷ್ಣು
ವೈಖಾನಸ
ಚಿತ್ರಗುಪ್ತ
ಮೃತ್ಯು
ಚಾರಕ
ಮೇಘ ಮುಖಿ
ನಾರದ
ಯಮ ದೂತರು

॥ ಶ್ರೀರಸ್ತು ॥

ಯಕ್ಷಗಾನ
ಏಕಾದಶಿ ದೇವಿ ಮಹಾತ್ಮೆ ಮುರಾಸುರ ವಧೆ

ರಾಗ-ನಾಟಿ-ಝಂಪೆ

ಜಯ ಜಯತು ಗಣನಾಥ | ಜಯತು ಜನಮುನಿ ಪ್ರೀತ | ಜಯ ಭಜಕರನು ಸತತ | ಜಯತು ಪೊರೆವಾತ || ಜಯ ಜಯತು ಜಯತು || ೧ || ಪಾಶಾಂಕುಶಧರನೆ | ಮೂಷಿಕಾರೋಹಣನೆ | ದೋಷಹರ ಮಧುಪುರ ನಿ | ವಾಸ ಜಗದೀಶ || ಜಯ ಜಯತು ಜಯತು || ೨ ||

ಕುಸುಮ ಷಟ್ಪದಿ

ಈಶನಭ ಕೇಶ ಪಣೆ | ಭೂಷ ಜಗದೀಶ ಭೂ | ತೇಶ ಪುರನಾಶ ಗಿರಿ ಜೇಶ ಕಾಶಿ || ವಾಸ ಪರಮೇಶ ಕುಸು | ಮೇಶರಿಪು ಕ್ಲೇಶಹರ | ಕಾಶಿ ಸಂಕಾಶತವ ದಾಸನ ಪೊರೆ || ೧ ||

ದ್ವಿಪದಿ

ಶ್ರೀ ರಾಘವೇಂದ್ರ ಸ್ವಾಮಿಗೆ ಕರವ ಮುಗಿದೂ || ನಾರಾಯಣನಿಗೆರಗಿ ಲಕ್ಷ್ಮಿಯನು ನೆನೆದು || ೧ || ಶಾರದೆಯ ಪ್ರಾರ್ಥಿಸುತ ಬ್ರಹ್ಮನಂ ಭಜಿಸೀ || ಮಾರುತಿಯ ಪೂಜಿಸುತ ನವಗ್ರಹರ ಸ್ತುತಿಸೀ || ೨ || ಸಂದಳಿಕೆ ಕವಿವರ್ಯ ಮುದ್ದಣಗೆ ಮುದದಿ || ವಂದಿಸುತ ಪಿತ್ತರಿಗೆ ಮಣಿದು ಸಂತಸದಿ || ೩ || ಘೋರ ನಾಡೀಜಂಘನ ನಿಮಿಷರಗೆಲಿದು | ಶ್ರೀರಮಣನನು ಗೆಲ್ಲಲೆನುತಲ್ಲಿ ಬಂದು || ೪ || ಕ್ಷೀರ ಸಾಗರದ ದ್ವಾರವನು ಬಂದಿಸಲೂ || ವೀರ ಗರುಡನು ದುರದೊಳವನನ್ನು ಕೊಲಲೂ || ೫ || ತಂದೆಯನು ಕೊಂದ ಸೇಡನ್ನು ತೀರಿಸಲೂ || ಕಂದ ಮುರಹರಿಯೊಡನೆ ಬವರವನು ಕೊಡಲು || ೬ || ದುರದೊಳಪಜಯ ಪೊಂದಿ ಮಾಧವನು ಬೆದರಿ || ಹರಿತಂದು ಹೇಮಾವತೀ ಗುಹೆಯ ಸೇರಿ || ೭ || ಮಲಗಿರಲು ಖಳ ಬಂದು ಖಡ್ಗದೊಳು ಬೇಗ | ನಳಿನಾಕ್ಷನನು ಕೊಲ್ಲಲನುವಾಗಲಾಗ || ೮ || ಹರಿಯ ವದನದಿ ದೇವಿ ಸಂಜನಿಸಿ ಖಳನ | ತರಿದಿರುವ ಚಾರಿತ್ರೆಯನು ಯಕ್ಷಗಾನ || ೯ || ರೂಪದೊಳು ಮಧು ಕುಮಾರನು ವಿರಚಿಸಿದನು || ಲೋಪವಿದ್ದರೆ ಕ್ಷಮಿಸಿ ವಿದ್ವಾಂಸರಿದನೂ || ೧೦ ||

Scanned by CamScanner

॥ ಭೈರವಿ - ಝಂಪೆ ॥

ಕುಂಭಿನೀಶ್ವರ ಕೇಳು | ಜಂಬಾರಿ ನಿರ್ಜರಕ | ದಂಬದೊಡನೋಲಗವ | ಸಂ
ಭ್ರಮದೊಳಿಸ್ತು ॥ ೧ ॥ ವರಸಿಂಹ ವಿಷ್ಟರದಿ | ಮೆರೆದಿರಲು ರಂಭಾದಿ | ತರು
ಣಿಯರು | ಹರಿತಂದು ಹರುಷದಿ ಕುಣಿಯಲು ॥ ೨ ॥ ಸುರಪಾಲ ಸಂತಸದಿ |
ಸುರ ಗಣಿಕೆಯರ ಕಳುಹಿ | ನೆರೆದಿರುವ ಬರ್ಹಿಲರ | ಕರೆದೆಂದನಾಗ ॥ ೩ ॥
ಸುಮನಸರು ಲಾಲಿಸಿರಿ | ಕಮಲನೇತ್ರನ ದಯದಿ | ಅಮರಾವತಿಯನಾಳ್ದೆ |
ಕುಮತಿಗಳ ತರಿದು ॥ ೪ ॥ ಆದಾರಾ ಖಳರುದಾ | ಮಾದ್ಯ ಮತ್ಸರದಿಂದ |
ಬಾದಿಪರು ಆಗಾಗೆ ! ಹಾದಿಯೇನಿದಕೆ ॥ ೫ ॥

॥ ಭೈರವಿ - ಅಷ್ಟ ॥

ಸುರಪಾಲ ಲಾಲಿಸಯ್ಯ | ರಾಕ್ಷಸರಿತ್ತ | ಬರಲು ನಾನಂಜೆನಯ್ಯ | ದುರದಲ್ಲಿ
ಹೋರಾಡಿ ತರಣಿಜಗೊಪ್ಪಿಪೆ | ಧರಿಸಯ್ಯ ಮನದಿಧರ್ಯ ॥ ೧ ॥ ಸಿರಿಗಳ
ನಾಶಿಸುತ | ದಾನವರೆಲ್ಲ | ಬರುವರು ನಾಕದತ್ತ | ಧರಿಸಿದ ಖಡ್ಗದೊಳ್ |
ಶಿರವನ್ನು ಖಂಡಿಸಿ | ದೊರಕಿಪ ಸುಃಖವನಿತ್ತ ॥ ೨ ॥ ಹರಿಜನೆಂದನು ಮಘ
ವಾ | ಖೂಳರಿಗೆ ಶಂ | ಕರನ ಸೇವಕರೆಂಬುವ | ಗರುವದೊಳಿಲ್ಲಿಗೆ | ಹರಿತಂದ
ರವರನ್ನು | ತರಿ ದಿಕ್ಕುವೆನು ನಿಶ್ಚಯ ॥ ೩ ॥ ದುಷ್ಟರೆಲ್ಲರು ತೆರಳಿ ಭಕ್ತಿಲಿ
ಪರ | ಮೇಷ್ಠಿಯ ಒಲಿಸುತಲಿ | ಜೇಷ್ಠರೆಂದರುಹುವ | ಹುಟ್ಟು ಸ್ವಭಾವವ |
ತಟ್ಟನೆ ನಿಲಿಸುವೆನು ॥ ೪ ॥

॥ ಮಧು ಮಾಧವಿ - ಅಷ್ಟ ॥

ಬಲು ಸಂತಸವಗೊಂಡೆ ನೀವೆಂದ ನುಡಿಗೆ | ಕಡು | ಗಲಿಗಳು ಖರೆ ನೀವು ಸಂ
ಗ್ರಾಮದೊಳಗೆ ॥ ಖಳ ಭೀತಿಯು ನಮಗಿನ್ನಿಲ್ಲ ಮುಂದೆ | ಶ್ಯಾಮಲ ವರ್ಣ
ನೊಲುಮೆಯು ಇರಲೆಮಗೊಂದೆ ॥ ೧ ॥

॥ ಕಾಂಬೋಧಿ - ಝಂಪೆ ॥

ಕ್ಷಿತಿಪ ಲಾಲಿಸು ಇಂದು | ವತಿಪತ್ತನದಿ ದೈತ್ಯ | ಪತಿ ನಾಡಿಜಂಘನೋಲ
ಗವ ॥ ಅತಿ ವೈಭವದೊಳಿತ್ತು | ಮತಿಯುತ ಸಚಿವ ಸೇನಾ | ಪತಿಗಳೊಳು
ತಾನೆಂದನಾಗ ॥ ೧ ॥ ಯೋಧರಿರ ಕೇಳಿರಿ ವಿ | ರೋಧಿಯಾಳುವನಾಕ | ವಾ
ದರಾತನ ಗೆಲ್ದು ಬಳಿಕ ॥ ಮಾಧವನ ಕೆಡಹೆತಯು | ರಾದೆ ನಿಮ್ಮಭಿಮತವ |
ಮೋದದರುಹೆನಲೆಂದರವರು ॥ ೨ ॥

॥ ಭೈರವಿ - ಅಷ್ಟ ॥

ದನುಜೇಂದ್ರ ಲಾಲಿಸಯ್ಯ | ಅಮರಾವತಿ | ಯನು ಪ್ರವೇಶಿಸುತಜೇಯ |
ಅನಿಮಿಷವಾರ ವ | ರಣದೊಳು ಸೋಲಿಸಿ | ಮನದಿಚ್ಛೆ ಪೂರೈಸುವ ॥ ೧ ॥
ಶರಜಾಕ್ಷ ಮಾಧವನು | ದೇವತೆಗಳ | ಮೊರೆ ಕೇಳಿ ಬರಲು ನಾನೂ | ಹರಿ
ತದ ಖಡ್ಗದೊಳ್ | ಕೊರಳಿರಿಯುತ ಜಯ | ತರುಣಿಯ ದೊರಕಿಪೆನು ॥ ೨ ॥
ತಡವೇಕೆ ಸೈನ್ಯವನೂ | ಶೀಘ್ರದಿ ಸಿದ್ಧ | ಪಡಿಸೆನೆ ಸೇನೇಶನೂ | ಧಡಿಗರ
ಕೂಡಿಸು | ತೊಡನೆಯೆ ಸುರಪನ | ಪೊಡವಿಯ ಮುತ್ತಿದರೂ ॥ ೩ ॥

ಕಂದ

ದುರುಳರು ಸುರಪುರವನು ಮು | ತ್ತಿರುವದನು ಚಾರಕರು ಕಂಡು ತಡೆಯಲು
ದಾನ | ವರು ಹೊಡೆದೋಡಿಸೆ ಬೇಗನೆ | ಸುರಪತಿಯು ಬಳಿಗೈದು ಹೇಳಿದರು
ಭವಣೆಯನು ॥ ೧ ॥

॥ ಮುಖಾರಿ - ಏಕ ॥

ಸುರರಾಯ ಲಾಲಿಸೆಮ್ಮ ನುಡಿಯಾ | ಮೂಲೋಕದ ಒಡೆಯ | ಸುರರಾಯ
ಲಾಲಿಸೆಮ್ಮ ನುಡಿಯಾ ॥ ದ್ವಾರದೊಳಿರುತಿರೆ | ಘೋರ ಖಳರು ಪರಿ | ವಾರ
ದೊಳೈದು ಧಾಳಿಯಗೈದರು ॥ ೧ ॥ ಧರಣೀ ಚಂದ್ರಾವತಿ ಎಂಬುದನು | ಪರಿ
ಪಾಲಿಸುತಿರುವ | ದೊರೆ ನಾಡೀಜಂಘನೆಂಬ ಖಳನೂ ॥ ದುರುಳರ ತರಿದಿಹ
ಹಗೆಯನು ತೀರಿಸೆ | ಹಿರಿಯವರೆಂಬುವ ಗರುವದಿ ಬಂದರು ॥ ೨ ॥

॥ ಸೌರಾಷ್ಟ್ರ - ತ್ರಿವುಡೆ ॥

ಚಾರಕರ ನುಡಿ ಕೇಳಿ ಸುರಪತಿ | ಭೂರಿ ರೋಷವ ತಾಳಿ ಸುರ ಪರಿ | ವಾರ
ದೊಡಬರೆ ಮಂತ್ರಿಗೆಂದನು ॥ ಹರಿಯುತಡೆದು ॥ ೧ ॥ ಎಲವೊ ದೂರ್ತನೆ
ಯಾರು ನಮ್ಮಂಥ | ಪೊಳಲ ಸೇರಿಹುದೇನು ನಿನ್ನಯ | ಖಳತನವ ತೋರಿಸಲು
ಕೊಲ್ಲುವೆ ॥ ಘಳಿಗೆಯಲ್ಲಿ ॥ ೨ ॥ ರೂಢಿ ಚಂದ್ರಾವತಿಯ ಅರಸನು | ನಾಡಿ
ಜಂಘನು ಸಚಿವ ಭಂಡನು | ದೂಡಿ ಸ್ವರ್ಗವ ನಾಳೆ ಬಂದೆನು ॥ ಓಡಿ ಬೇಗ
॥ ೩ ॥ ರಕ್ಕಸನೆ ನಿನಗೇನು ಸ್ವರ್ಗದಿ | ಹಕ್ಕಿಹುದುಪಿಂ ತೆರಳಿ ಹೆಂಡತಿ |
ಮಕ್ಕಳೊಡನಿಹುದುತ್ತಮೊದರಲು ॥ ಸೊಕ್ಕ ಮುರಿವೆ ॥ ೪ ॥ ಜೇಷ್ಠ ಭಾಗಿ
ಗಳಾಗಿಹೆವು ಪುರ | ಬಿಟ್ಟು ಪೋದರೆ ಲೇಸು ಅಗ್ನಿಯೆ | ಸಿಟ್ಟ ಬರಿಸಲು ತಟ್ಟ
ನೀಗಲೆ ॥ ಕುಟ್ಟ ಕೊಲುವೆ ॥ ೫ ॥ ದುಷ್ಟ ನಿಮ್ಮಂತಿರುವ ಧನುಜರು | ಎ

ಪ್ಟೊ ಸಾರೀ ಪುರಕೆ ಧಾಳಿಯು | ನಿಟ್ಟು ಮಡಿದರು ನಿನಗು ಆ ಗತಿ || ಕಟ್ಟ ಕಡೆಗೆ || ೬ || ನುಡಿಯದಿರು ಬಡಿವಾರ ತನಗಳ | ನಡುಗುವವನಿವನಲ್ಲವೆ ನ್ನುತ | ಒಡನೆ ಶರಗಳ ವಾರವೆಸೆಯಲು || ಕಡಿಯುತಗ್ನಿ || ೭ || ಬಳಿಕ ಕೋಲ್ಮಳೆಗಳನು ಸುರಿಸಲು | ಖಳನು ತುಂಡಿಸಿ ವರುಣ ಬಾಣವ || ಘಳಿಲನೆ ಸೆಯಲು ಸೋತನಗ್ನಿಯು || ಇಳೆಯರಸನ || ೮ || ಪಾವಕನು ಸೋಲಲ್ಕೆಶೈ ಮಿನಿ | ದೇವ ಗರ್ಜಿಸಿ ಬರಲು ಕಾಣುತ | ಠೀವಿಯಲಿ ಖಳ ವಜ್ರದಂತನು || ಧಾವಿಸೆಂದ || ೯ ||

|| ಕೇದಾರ ಗೌಳ - ಝಂಪೆ ||

ಭಳಿ ಭಳಿರೆ ಭಾನುತನಯಾ | ಎನ್ನೊಡನೆ | ಕೊಳುಗುಳಕೆ ಆನುವಾದೆಯಾ | ಒಳಿತಾಯ್ತು ಮಾರಾಂತದು | ಸತ್ತ ಹೆಣ | ಗಳನೊಯ್ವ ತೆರವಲ್ಲಿದು || ೧ || ಸಾಕೆಲವೊ ನಿನ್ನ ದಂಡ | ಪಾಶಗಳು | ಯಾಕಿಲ್ಲಿ ಬೇಡ ದಂಡ | ಆ ಕಪಾಲಿ ಯನು ಬಿಡೆನೊ | ನಿರ್ಜರರ | ನೀಕವನು ಪುಡಿಗೈವೆನು || ೨ || ನಿಮಗಿಹುದು ಶೋಣಿತಪುರ | ನಮಗಿಹುದು | ಅಮರಾವತಿಯು ಈ ತೆರ | ಕುಮತಿಗಳೆ ಇಲ್ಲಿ ಗೈದು | ಭಾದಿಪುದು ಸಮವಲ್ಲ ಪೇಳಿ ತಿಳಿದು || ೩ || ಧರ್ಮ ಶ್ರವಣವ ಕೇಳಲು | ಬಂದಿಲ್ಲ | ಧರ್ಮರಾಯನೆ ಜವದೊಳು | ನಿಮ್ಮರಸಗಿದನು ಪೇಳಿ | ನ್ಯಾಯದೊಳು | ಒಮ್ಮತದೊಳಿರುವಭಾಳಿ || ೪ || ನೀತಿಯೊಳು ಕೇಳಿ ನೀನು | ನಿನ್ನೊಡನೆ | ಮಾತಾಡಿ ಫಲಗಳೇನೂ | ಆತುಕೊಳ್ಳೆನುತ ಯಮನು | ಅಸ್ತ್ರ ಗಳ | ವ್ರಾತವನು ತೆಗೆದೆಸೆದನೂ || ೫ || ಬಿಟ್ಟಸ್ತ್ರ ತರಿದು ಖಳನೂ | ಆಗ ಘೋ|ರ್ಗುಟ್ಟು ತಂಬಿನ ತತಿಯನೂ | ತಟ್ಟನೆಸೆಯಲು ರವಿಜನೂ | ಸೋತು ಕಂ | ಗೆಟ್ಟರಮನೆಯ ಸೇರ್ದನೂ || ೬ ||

ವಾರ್ಧಿಕ

ಪೊಡವಿ ಪಾಲಕ ಕೇಳು ಧಡಿಗರೀ ತೆರದಿಂದ | ಕಡು ಪರಾಕ್ರಮಿ ಪಾವಕನ ಯಮನ ಮೊದಲಾದ | ಕಡವಳರ ಗಡಣವಂ ಬಡಿದೋಡಿಸುತ ಮುಂದ ಕೈತರಲು ಮಘವ ಕಂಡು || ಪ್ರುಡನಂತೆ ಕೆಂಗಿಡಿಯು ಸೂಸುತ್ತ ವಜ್ರವಂ ಪಿಡಿದು ಕೆಲ ದಾನವರ ಹೊಡೆದಪ್ಪಳಿಸಿ ಶಿರವ | ಪುಡಿಗೈದು ಬರಲು ನಾಡೀಜಂಘ ಖಾತಿಯಲಿ ತಡೆದೆಂದ ಸುರಪಾಲಗೆ || ೧ ||

|| ಭೈರವಿ - ಅಷ್ಟ ||

ವಾಸವ ಸಂಗ್ರಾಮಕೇ | ಬಂದೆಯ ಬಲು | ಲೇಸಾಯ್ತು ಖಳ ವಂಶಕ್ಕೇ | ನೋಸಗೈದೆಯ ಜೀವ | ದಾಸೆಯುಳ್ಳಡೆ ಎನ್ನ | ದಾಸನಾಗುವದೊಳ್ಳಿತು || ೧ || ಧನುಜೇಶ ಯಾರು ನೀನೂ | ಕಾಣಲು ಹೊಸ | ಬನು ನಿನ್ನ ನಾಮವೇನೂ | ನಿನಗೆನ್ನೊಳ್ಳೊರಲೇ | ನೆನಿಸದು ಜವಪುರ | ವನು ತೋರ್ಪೆ ಕ್ಷಣದೊಳಿನ್ನು || ೨ || ಕ್ಷುದ್ರ ಖೂಳನೆ ನಿಮಗೆ | ಶೋಣಿತೆಪುರ | ಸಿದ್ಧವಾಗಿಹುದು ಹೀಗೆ | ಸದ್ದಿಲ್ಲದೆಮಗೆ ಉ | ಪದ್ರವನಿತ್ತರೆ | ಸದ್ದಡಗಿಸುವೆಗೂಗೆ || ೩ || ದಿತಿವಂಶ ಸಂಭವನೂ | ನಾಡೀಜಂಘೆ | ನ್ನುತ ಕರೆವರು ಎನ್ನನೂ | ಕ್ಷಿತಿ ಮೂರರೊಳು ಬಲಾ | ನ್ವಿತನಹೆ ಸ್ವರ ಬಿಟ್ಟು | ಹಿತದಿಂದ ಬಾಳು ನೀನೂ || ೪ || ಹರಿ ಭೃತ್ಯ ಪ್ರಹ್ಲಾದನೂ | ಶೋಣಿತಪುರ || ಪರಿಪಾಲಿಸುತಿಹನೂ | ಹರಿ ಭಕ್ತರಿಂ ಗೆಲ್ಲ | ದುರಿತವಾಗಲು ನಿನ್ನ | ಪುರಕಾಗಿ ಧಾಳಿಟ್ಟೆವು || ೫ || ಚಂದ್ರಾವತಿಯ ನಾಳುವ | ಸಂಗತಿಗಳ | ಮುಂದೆ ನಾ ತಿಳಿದೆಲ್ಲವ | ಹಂದೆ ನಿನ್ನಯ ಬುದ್ಧಿ | ಯಿಂದೆನ್ನೊಳ್ ಮೆರೆಸಲು | ಬಂದೆಯ ಕೊಲುವೆ ನಿನ್ನ || ೬ || ಬಿಡು ಬಿಡು ಬಡಿವಾರವ | ನೆನ್ನುತ ದೈತ | ನೊಡನೆಯೆ ಹರಿಶರವ | ಬಿಡಲಾಗ ಮಘವನು | ಜಡ ಬಾಣದೊಳಗದ | ಕಡಿದನು ಶೀಘ್ರದೊಳು || ೭ || ಮರುತಸ್ತ್ರವನು ಬಿಡಲೂ | ಇಂದ್ರನು ಬೇಗ | ಹರಿ ಮಾರ್ಗಣಂಗದೊಳು | ತರಿಯಲ್ಕೆ ಗೋತ್ರುವ | ದುರುಳ ಹೂಡಲು ತುಂ | ಡರಿಸಿದ ವಜ್ರದೊಳು || ೮ || ಉರಗಸ್ತ್ರವನ್ನಿವನೂ | ತೆಗೆದೆಸೆಯಲು | ಗರುಡನೊಳಿರಿದವನೂ | ಹರಿಶಕ್ತಿ ತೆಗೆಯಲು | ಪುರುಹೂತ ಕಾಣುತ | ತಿರುಗಿಸಿದನು ಬೆನ್ನನೂ || ೯ ||

|| ಕೇದಾರ ಗೌಳ - ಝಂಪೆ ||

ಸುರಪುರವ ವಶಕರಿಸುತ | ಬಳಿಕಿನ್ನೂ | ಹರಿಯನ್ನೂ ಗೆಲುವೆನ್ನುತ | ಬರುತಿರಲು ಮಾಧವನನೂ | ಕಾಣಲ್ಕೆ | ಬರುವವರ ತಡದೆಂದನೂ || ೧ || ಯಾರಯ್ಯ ನೀವೆಲ್ಲರೂ | ಯಾವೆಡೆ ಸ | ವಾರಿ ಎಂದೆಂಬುದುಸುರು | ಕಾರಣಗಳ್ಯಾವುದೆನುತ | ಎನಲು ಮು | ತ್ತೋರ್ವನೆಂದನು ಬೆದರುತ || ೨ || ಧನುಜೇಂದ್ರ ನಾವೆಲ್ಲರು | ಹರಿಯು ದರು | ಶನಕೆಂದು ಪೋಗುವವರು | ದಿನನಿತ್ಯ ಬರುತಲಿಹೆವು | ತಡೆಯದಿರು | ಚಿನುಮಯನ ಕಂಡುಬಹೆವು || ೩ || ಕಡು ಕಪಟಗನನ ನೋಡಲೆ | ಬಂದವರ | ಬಿಡಬಾರದೆಂದೆನುತಲೆ | ಪಿಡಿದವರ ಬೆನ್ನಟ್ಟುತ | ನಿಂತಲ್ಲೆ | ಒಡನೆ ದ್ವಾರವ ತಡೆಯುತ || ೪ ||

॥ ಮಧ್ಯಮಾವತಿ - ತ್ರಿವುಡೆ ॥

ಅರಸ ಕೇಳ್ವೈಕುಂಠದಲಿ ಶ್ರೀ | ವರನು ಹರುಷದಿ ಶೇಷಶಯನದೊ | ಳಿ‌‌‌ ಭಜಕರು ದರುಶನಕೆ ಬಲಿದಿರುವದೀಕ್ಷಿಸಿ ಗರುಡನ ॥ ಕರೆಯುತೆಂದ ॥ ೧ ॥ ಗರುಡ ಏನಿದು ನಿರತ ಎನ್ನಯ | ಚರಣ ದರುಶನ ಪಡೆಯಲೋಸುಗ | ಬರುವ ಭೃತ್ಯರ ನೆರವಿ ಕಾಣದು | ಅರರೆ ಅಚ್ಚರಿ ತೋರ್ಪುದು ॥ ಪರಿಯಿದೇನು ॥ ೨ ॥ ಸರಸಿಜಾಕ್ಷನೆ ಮೂರು ಜಗದಲಿ | ದುರುಳರತಿ ಹೆಚ್ಚಾಗಿ ತಮಗುಣ | ಮೆರೆಯುತಿದೆ ವೈಷ್ಣವರು ನಿಮ್ಮನು | ಮರೆತಿರುವರೆಂದೆಂಬುದು ॥ ಅರಿವದೆನಗೆ ॥ ೩ ॥ ಹರಿಹರರು ನಾವೊಂದೆ ತಾಮಸ | ಧರೆಯೊಳತಿಮಿತಿ ಮೀರಿದರು ಅಜ | ತರಳ ನಾರದನೆನ್ನ ನಾಮೋಚ್ಚ | ರಣೆ ತೊರೆವವನಲ್ಲವ ॥ ಬರನು ಯಾಕೆ ॥ ೪ ॥ ಇಂದಿರಾವರ ಕೇಳು ಬ್ರಹ್ಮನ | ಕಂದ ತಂದೆಯ ರಾಜಸಗುಣವ | ಪೊಂದಿ ನಡೆಯುವನೇನೊ ನಿಮ್ಮನು | ಇಂದು ಮರೆತಿಹ ಕಾರಣ ॥ ಒಂದೆ ದಿಟವು ॥ ೫ ॥ ಆದಿಯೊಳಗೀರ್ವರೊಳಗಾಗಿಹ | ವಾದದೊಳು ರಾಜಸವು ಗರ್ವದಿ | ಕಾದಿ ಸೋತುದನರಿತಿರುವ ಮುನಿ | ವೇದ ಓದಿದ ಜ್ಞಾನಿಯು ॥ ಬೇದವೆಣಿಸ ॥ ೬ ॥

॥ ಸೌರಾಷ್ಟ - ತ್ರಿವುಡೆ ॥

ಆದಡಿದಕನುಮಾನವೇತಕ | ಮೋದದೊಳಗಾಜ್ಞೆಯನು ಕೊಡಲು ಕ್ಷ | ಣಾರ್ಧದೊಳು ಪರಿಕಿಸುತ ಬರುವೆನು ॥ ಸಾಧು ವಂದ್ಯ ॥ ೧ ॥

॥ ಭಾಮಿನಿ ॥

ಎಂದು ಈರ್ವರು ನುಡಿಯುತಿರೆ ದೇ | ವೇಂದ್ರ ಭವಣೆಯ ಹರಿಗೆ ದೂರುವೆ | ನೆಂದು ಬರುತಿರೆ ಹಾದಿಯೊಳು ಖಳರಿದ್ದುದನು ಕಂಡು ॥ ಮುಂದುಪಾಯವ ದೋರದಾಕ್ಷಣದೊಂದು ಭ್ರಮರದ ರೂಪ ತಾಳುತ | ಬಂದು ನಿಜದೋರುತ್ತ ವಂದಿಸಲೆಂದ ಮಾಧವನು ॥ ೧ ॥

॥ ನವರೋಜ - ಏಕ ॥

ಪಾಕಶಾಸನ ಏಳು | ನೀ | ನೇಕಿಂದೀ ರೂಪದೊಳು | ಶೋಕಿಸುತೆನ್ನಯ | ಲೋಕಕೆ ಬಂದಿಹೆ | ನಾಕವೇನಾಯ್ತು ವಿ | ವೇಕದೊಳ್ಪೇಳು ॥ ೧ ॥ ಕ್ರೋಡವತಾರಿಯೆ ಕೇಳು | ಖಳ | ನಾಡೀಜಂಘನು ಮೇಲೂ | ರೂಢಿಗೈದು ಕಾ | ದಾಡುತ ಸುರರನು | ಓಡಿಸಿ ಬಲು ಮೆರೆ | ದಾಡುವ ಮದದೊಳು ॥ ೨ ॥

ದೂರಲು ನಿಮ್ಮೆಡೆ ಬರಲೂ | ಈ | ದ್ವಾರವ ಮುಚ್ಚಿಹ ಮೊದಲೂ ದಾರಿಯೊಳ್ಚಕ್ರರವಾರವು ಪಿಂಡಕೆ | ಸಾರ್ವದವನ ಸಂ | ಹಾರವನೆಸಗೈ ॥ ೩ ॥ ಆದಡಲೇ ಸುರಪಾಲ | ನೀ | ಖೇದವನಿಕ್ಷಣ ತಾಳ | ಭಾದೆಯನಿತ್ತ ಖ | ಳಾದಮನ ಹರಿಯ | ಮೇಧಿನಿಗಟ್ಟುವೆ | ಮೋದದಿ ತೆರಳೈ ॥ ೪ ॥

॥ ಮಾರವಿ - ಏಕ ॥

ಸುರಪತಿ ತೆರಳಲು ಸಿರಿವರನಾಕ್ಷಣ | ಭರದಿಂರೋಷದಲಿ | ಪೊರಡಲು ಕಾಣ ಗರುಡನು ಚರಣ | ಕ್ಕೆರಗುತಲಿಂತೆಂದ ॥ ೧ ॥ ಮಧುಸೂದನನೀ ಅದಮನವಧಿಸಲು | ಒದಗುವದೊಳಿತಲ್ಲ | ಕದನಕನುಜ್ಞೆಯ | ಮುದದೊಳಗಿತ್ತರೆ | ಸದೆದು ಬರುವೆ ಕ್ಷಣದಿ ॥ ೨ ॥ ಅಂಗಜಹರ ರಣರಂಗಕೆ ಬಂದರೆ | ಹಿಂಗದೆ ಶೌರ್ಯದಲಿ | ಭಂಗಿಸಿ ದಾನವ ಪುಂಗವನಳಿದರ | ಪಂಗದ ಕಟ್ಟುವೆನು ॥ ೩ ॥ ಒಡನೆಯೆ ಭಜಕರ ಗಡಣವತಡೆದಿಹ | ಧಡಿಗರ ಕೊಲದಿರಲು | ಅಡಿಯನು ನಿನಗಲ್ಲೆಂದಡಿಗೆರಗಲು | ಒಡನೆಯೆ ಕಳುಹಿದನು ॥ ೪ ॥

॥ ಕಂದ ॥

ಹರಿಯೊಳಪ್ಪಣೆಯಂಪಡೆದು | ಗರುಡನತಿಗರ್ಜಿಸುತ ವೇಗದಿ ಬರುತ್ತಿರುವ ॥ ಭರಕೆ ದಾನವರು ಕಾಣುತ | ವರೊಳು ಭಂಡಾಸುರ ತಡೆದೆಂದ ಪಕ್ಷೀಂದ್ರನ ॥ ೧ ॥

॥ ಮಾರವಿ - ಏಕ ॥

ನಿಲು ನಿಲುಹುಲು ಪಕ್ಷೀಂದ್ರನೆ ಎಮ್ಮಯ | ಖಳರನು ಚದರಿಸುತ | ಸುಲಭದೊಳೈದಿಹೆ ಕೊಲುತೀಕ್ಷ್ಣ ಯಮ | ನಿಲಯಕೆ ಸೇರಿರುವೆ ॥ ೧ ॥ ದೂರ್ತನೆ ಬಗುಳುವದ್ಯಾತಕೆ ಅನಿಮಿಷ ಮೊತ್ತವ ಕಂಗೆಡಿಸಿ | ಭಕ್ತರ ದ್ವಾರವ ಬಿಡಿಸಲು ಬಂದಿಹೆ ಕತ್ತನು ತುಂಡಿಸುತ ॥ ೨ ॥ ಹೆಮ್ಮೆಯ ಬಿಡು ಒಂದೊಮ್ಮೆಗೆ ಶಂಕರ | ಘಮ್ಮನೆ ನಡೆ ತಂದು | ನಮ್ಮೊಳು ನುಡಿದರು ನಿಮ್ಮಯ ದ್ವಾರವ | ಸುಮ್ಮಗೆ ಬಿಡೆ ನಾವು ॥ ೩ ॥ ಫಡಫಡದಡಿಗನೆ ಬಿಡು ಬಡಿವಾರವ | ನಡೆಯದು ಎನ್ನೊಡನೆ | ಮೃಡನಂತಿರಲೀಗೊಡನೆಯೆ ದ್ವಾರವ | ಬಿಡದಿರೆ ಸೀಳುವೆನು ॥ ೪ ॥ ಪಕ್ಷಿಯೆ ನಿನ್ನನು ಲೆಕ್ಕಿಪರಾರೈ | ಇಕ್ಷುಬಿಲ್ಲನ ಪಿತನ | ಈ ಕ್ಷಣ ಕಯ್ಯೊಳ್ಸೊಕ್ಕ ಮುರಿದು ಗಣ | ಕಿಕ್ಕುವೆ ಔತಣವ ॥ ೫ ॥ ನದಿಯನು ಹಾರದ ಮಾನವಲವಣಾಂ | ಬುಧಿಯನು ದಾಂಟುವನೆ | ಒದರುತ ಫಲವಿಲ್ಲೆನ್ನುತ ಶಕ್ತಿಯೊ | ಳೊದೆದನು ರಾಕ್ಷಸಗೆ ॥ ೬ ॥ ದುರುಳನು ತಪ್ಪಿಸಿ ಮಾರ್ಗಣವೆಸೆ

ಯಲು । ಗರುಡನು ಚೂರ್ಣಿಸುತ । ಭರದಿಂಕೊಕ್ಕಿನೊಳೆರಗಲು ಬೆದರುತ । ಹರಿದನು ದಾನವನು ‖ ೭ ‖

‖ ಸೌರಾಷ್ಟ್ರ - ತ್ರಿವುಡೆ ‖

ಭೆಂಡನೋಡಲು ವಜ್ರದಂತನು । ಕಂಡು ಖಾತಿಯಗೊಂಡುತಾಮುಂ । ಕೊಂಡು ಗರುಡನ ತಡೆದು ಗರ್ಜಿಸು ‖ ತೆಂಡನಾಗ ‖ ೧ ‖ ವೀರ ನಹೆ ಶಹಭಾಸು ಪಕ್ಷಿಯೆ । ಶೂರ ಭಂಡನಗೆಲ್ದೆ ನಸ್ನುತ । ಹಾರದಿರು ಇದಿರಾಗಿ ಬಂದಿಹೆ ‖ ತೋರು ಶೌರ್ಯ ‖೨‖ ಅಸುರರೊಳು ನೀನಾರು ನಿನ್ನಯ । ಪೆಸರದೇನೈ ಒಡೆಯೆನ್ಯಾರೆಂ। ದುಸುರುದ್ವಾರವನಡ್ಡ ಗಟ್ಟಿದ ‖ ವಿಷಯ ವೇನು ‖ ೩ ‖ ಇಂದ್ರನಮ್ಮಾಂಶೋದ್ಭವರಹರಿ । ಯಿಂದ ಕೊಲಿಸುತ ಮೆರೆದನಾ ಹಗೆ। ಯಿಂದವನ ಸೋಲಿಸುತ ಧಾರಿಯ ‖ ಬಂದಿಸಿಹೆವು ‖ ೪ ‖ ಎಷ್ಟೊ ರಕ್ಕಸರೀತೆರದಿ ಥಾ । ಳಿಟ್ಟುರಂಜಿಸೆ ಕುಟ್ಟಿ ಕೆಡಹುತ । ದುಷ್ಟಮರ್ದನನೆಂಬ ನಾಮವ‖ ಪಟ್ಟೆ ಹರಿಯುಂ ‖ ೫ ‖ ಹರಿಯ ಗಣ್ಯಕೆ ತರೆನುಭವರದಿ ಮೆರೆಸು ನಿನ್ನಯ ದೀರತನವೆಂ । ದರುಹಿಕೋಲ್ಮಳೆ ಸುರಿಸೆಗರುಡನು ‖ ಗರುವದಿಂದ ‖ ೬ ‖ ಕತ್ತರಿಸಿ ವೈಕುಂಠ ಪತಿಯನ್ನು । ಚಿತ್ತದಲಿ ನೆನೆಯುತ್ತಕೊಕ್ಕೊಳು । ನೆತ್ತಿಯಸು ಕುಕ್ಕುಲ್ಕೆ ಓಡಿದ ‖ ನತ್ತಖೂಳ ‖ ೭ ‖

ಭಾಮಿನಿ

ವೀರ ಗರುಡನುದಾನವರ ಪರಿ । ವಾರವಂ ಹೊಡೆದೋಡಿಸುತಗಂ। ಭೀರ ತನದಲಿ ಹಾರುತಿರೆಖಳ ನಾಡಿ ಜಂಘಾಗ ‖ ದೂರದಿಂ ಕಾಣುತ್ತ ಕರದಲಿ । ಕೂರಸಿಯತಿರುಹುತ್ತ ಭೀಕರ । ವೀರ ಭದ್ರನ ತೆರದಿ ಕೂಗುತ ತಡೆಯುತಿಂತೆಂದ ‖ ೧ ‖

‖ ಶಂಕರಾಭರಣ - ಮಟ್ಟೆ ‖

ಭಳಿರೆ ವೀರನಹುದು ಗರುಡ । ಕಲಹದೊಳಗೆ ಮಂತ್ರಿವರರ । ಗೆಲಿದೆ ಯಮು ಕ್ಷಣದಿ ನಿನ್ನ । ಗಳವ ತೆಗೆವೆನು ‖ ೧ ‖

‖ ಭೈರವಿ - ಅಷ್ಟ ‖

ನೀನೆಯೋ ನಾಡೀ ಜಂಘಾ । ಚಂದ್ರಾವತಿ । ರಾಣ್ಯಾದಿಖಳರ ಸಂಘ । ಜಾಣ್ಮೆಯೊಳ್ಬಿಸಿ ವೈ ಮಾನಿಕರನು ಗೆದ್ದು । ಕಾನನಕಟ್ಟಿದ್ಯಾಕೆ ‖ ೧ ‖

‖ ಶಂಕರಾಭರಣ - ಮಟ್ಟೆ ‖

ನೀನು ಕೇಳ್ವನ್ಯಾರೊ ಮಾತು । ದಾನರುಗಳಿಗಿರುವ ರಾಜ । ಧಾನಿ ಬಿಡದಿರಲ್ಕೆ ಗೆದ್ದು ‖ ನಾನೆ ಆಳುವೆ ‖ ೧ ‖

‖ ಭೈರವಿ - ಅಷ್ಟ ‖

ಬಿಡು ಬಿಡು ಮಾಧವನ । ಕಾಣಲು ಬಹ । ಬಡ ಭಕ್ತ ವಾರವನ । ತಡೆದಟ್ಟಿದಾರಿಯೊ । ಳ್ಬಿಡ ದೀರ್ಘ ಕಾರಣ । ನುಡಿ ಶೀಘ್ರದಲಿ ಕುಮನ ‖ ೧ ‖

‖ ಶಂಕರಾಭರಣ - ಮಟ್ಟೆ ‖

ಸುರರ ಮೊರೆಯ ಕೇಳಿ ಖಳರ ನೆರವಿತರಿದ ಹರಿಯ ತೇಜ । ತರಿಯಲೆನುತ ಡಿಂಗರಿಗರು । ಬರಲು ತಡೆದನು ‖ ೧ ‖

‖ ಭೈರವಿ - ಅಷ್ಟ ‖

ಈ ರೀತಿ ಯೊಳು ಬಾಧೆಯಾ । ನಿತ್ತವರನ್ನು । ಮಾರ ಜನಕ ಭೂಮಿಯಾ। ಭಾರತಿದ್ದಲ್ಕೆ ಸಂ । ಹಾರಗೈಯ್ಯುವನಿನ್ನ । ತೀರಿಸಲ್ಬಂದೆ ನಾನೂ ‖ ೧ ‖ ಕುಂಡಲಿ ಭೂಷನೊಳು । ನಾವರ ಪಡ । ಕೊಂಡಿಹೆ ಪೂರ್ವದೊಳು । ಪುಂಡರಿಕಾಂಬಕ । ಪುಂಡರಿಕೋದ್ಭವ । ಬಂದರು ಬೆದರೆ ನಾನು ‖ ೨ ‖ ಹಾಗಾದರೆನ್ನಧಟ । ನೋಡೆನ್ನುತ । ನಾಗಾಶನೊಂದು ಏಟ । ಆಗಲೆ ಖಳಗಿಡ । ಬೇಗನೆ ತಿರುಹುತ । ಕೂರ್ಗಣೆ ತೆಗೆದು ಬಿಟ್ಟ ‖ ೩ ‖ ದಾನವ ಬಿಟ್ಟಿರುವ। ಮಾರ್ಗಣಗಳ । ಪ್ರಾಣದಿ ಪಕ್ಷಿಧವ । ಪೂರ್ಣ ಚೂರ್ಣಿಸುತಾಗ । ಪ್ರಾಣವ ಹೀರಲ್ಕೆ । ಕ್ಷೋಣಿಯೊಳೊರಗಿದನು ‖ ೪ ‖

ಭಾಮಿನಿ

ಖಳನು ಬಿದ್ದುದಕಂಡು ಧನು ಜರ । ಬಳಗದೆ ಸೆಗೆಟ್ಟೋಡೆ ಗರುಡನು । ನಿಲಯಕ್ಕೆ ತಂದಿರಲು ನಾಡೀ ಜಂಘನನು ಚರರು । ಅಳುತ ಚಂದ್ರಾವತಿಯ ಸೇರುತ । ಅಳವಿಯೊಳಗಾಗಿರುವ ವಾರ್ತೆಯ । ಒಳಗೆ ಬಂದಾ ಅಸುರನರಸಿಯೊಳಿಂದ ವಂದಿಸುತ ‖ ೧ ‖

‖ ಸಾರಂಗ - ಅಷ್ಟ ‖

ಕೇಳಮ್ಮ ಎಮ್ಮೊಡತಿ । ನಿಮ್ಮೊಡೆಯನ।ಕಾಳಗದಾ ಸಂಗತಿ। ಪೇಳುವದೇನ್ಸುರ। ಜಾಲವಸಮರದಿ । ಸೋಲಿಸಿ ನಾಕವ । ನಾಳಿದರ್ವಿಭವದಿ ‖ ೧ ‖ ಮತ್ತಾದ ಕಥೆಗಳನು । ಏನೆಂದು ನಾ । ವಿಸ್ತರಿಸುವದದೆನು । ಚಿತ್ತಜನಯ್ಯನ ಭಕ್ತರ ತಡೆಯುತ । ಪತ್ತನ ದ್ವಾರ ನಿತ್ತರು ಬಂದಿಸಿ ‖ ೨ ‖ ಅನಿತರೊಳೊಂದು ಪಕ್ಷಿ । ಹಾರುತ ಬಂದು । ದನು ಜರನೆಲ್ಲ ಕುಕ್ಕಿ । ಹಸನಗೈಯ್ಯಲು ನಿಮ್ಮ ಇನಯ ಕಾಣುತ ಯುದ್ಧ । ಪನು ಮಾಡಿ ಶೈಮಿನಿ । ಯನು ಸೇರ್ದರಯ್ಯಯ್ಯೊ ‖ ೩ ‖

॥ ಕಂದ ॥

ಚರನೆಂದ ನುಡಿಯನು ಕೇಳಿ | ಶಿರಕೆಸಿಡಿಲೆರಗಿದಂತಾಗೆ ಮೇಘ ಮುಖಿ ತಾ ॥ ಧರಣಿಯೊಳು ದೊಪ್ಪನೆ ಬಿದ್ದು | ಹೊರಳು ತಳಲಿದಳುತನ್ನಯ ಪತಿಯನೆನೆ ನೆನೆದು ॥ ೧ ॥

॥ ಆನಂದ ಭೈರವಿ - ಏಕ ॥

ಪತಿಯೆ ಮಡಿದೆಯಲ್ಲ ಎನಗೆ | ಗತಿಯಿನ್ನಾರು ಉಮೆಯರಸಗೆ | ವೇದ್ಯವು ॥ ಬಹಳ | ಚೋದ್ಯವೂ ॥ ೧ ॥ ಮೂರು ಜಗದಿ ನಿಮ್ಮ ದುರದೀ | ಶೂರರಿಹರೆ ಸುಗುಣ ಶರಧಿ | ಕೊಂದನೇ | ಪಕ್ಷಿ | ತಿಂದನೇ ॥ ೨ ॥ ವಾಸವ ಕೇಶವಗೆ ಪೇಳಿ | ಘಾಸಿಗೈಸಿದಾತ ತಾಳಿ | ಕಲಿಸುವೆ | ಮದವೇ ನಿಲಿಸುವೆ ॥ ೩ ॥ ಎದ್ದು ಬೇಗ ಶುಕ್ರನೊಡನೆ | ವಿಧ್ಯೆ ಪಟಸುತಿರುವ ಸುತನ | ಕರೆದಳು | ದುಃಖ | ತೊರೆದಳು ॥ ೪ ॥

॥ ಕೇದಾರಗೌಳ ಝಂಪೆ ॥

ಬಾ ಕಂದ ಬಾರೊ ಮುರನೇ | ಮೆರೆವರ | ತ್ನಾಕರೋಪಮ ಸುಗುಣನೇ | ಸೋಕಿರುವ ಮನದ ವ್ಯಥೆಯ | ಬಿಡಿಸುಗಜ | ನೀಕರಿಪು ಸಿಂಹರಾಯ ॥ ೧ ॥ ಯಾಕೆನ್ನ ಕರೆದೆ ಜನನೀ | ತೊರೆ ಮನದ | ವ್ಯಾಕುಲವಕೀರವಾಣೀ | ಈ ಕಥೆಯ ಪೇಳು ಬೇಗ | ಹದಿನಾಲ್ಕು | ಲೋಕವನು ಸುಡುವೆನೀಗ ॥ ೨ ॥

॥ ಆನಂದ ಭೈರವಿ - ಏಕ ॥

ಕಂದ ನಿನ್ನ ತಂದೆ ಮೊನ್ನೆ | ಇಂದ್ರ ಲೋಕ ಗೆಲ್ದು ನಿನ್ನೆ | ಮಡಿದರೂ | ಸ್ವರ್ಗ | ಪಡೆದರೂ ॥ ೧ ॥

॥ ಕೇದಾರ ಗೌಳ - ಝಂಪೆ ॥

ಯಾರಮ್ಮ ಎನ್ನ ಪಿತನಾ | ಕೊಂದವನ | ಊರೆಲ್ಲಿ ನಾಮವನ್ನಾ | ಭೂರಿ ಕ್ಷಣದರುಹುಕೊಂದು | ದಿನಮಣಿಕು | ಮಾರಗೊಪ್ಪಿಸುವೆನಿಂದು ॥ ೧ ॥

॥ ಆನಂದಿ ಭೈರವಿ - ಏಕ ॥

ಸುರಪಹರಿಗೆ ದೂರೆ ಪಕ್ಷಿ | ಗರುಡ ಬಂದು ಪಿತನ ಕುಕ್ಕಿ | ತರಿದನೋ | ಣದಿ | ಮೆರೆದನೂ ॥ ೧ ॥

॥ ಕೇದಾರ ಗೌಳ - ಝಂಪೆ ॥

ಶಕ್ರನನು ಮೊದಲುಕೆಡಹಿ | ಆ ಬಳಿಕ | ಪಕ್ಷಿಯನು ಪಿಡಿದು ತಿರುಹಿ | ರಕ್ತವನು ಕಾರಿಸುವೆನೂ | ಸೊಕ್ಕಮುರಿ | ದಿಕ್ಕುವೆನು ಹರಿಯ ನಾನು ॥ ೧ ॥ ದುಡುಕು ತನವೀಗ ಬೇಡ | ಮಾಧವನು | ಕಡುಕಪಟಿಯಲ್ಲ ಮೂಢ | ನಡೆ

ಶಂಕರನ ಒಲಿಸುತ | ಬೇಗವರ | ಪಡೆದು ಬಾಜಯುವರಿಸುತ ॥ ೨ ॥ ಹರ ಸಿಕಳುಹಲ್ಕೆ ಖಳನೂ | ಅಡವಿಯೆಡೆ | ಪರಿತಂದು ಸುಸ್ಥಳವನು | ಅರಸುತ್ತ ಮಿಂದುಬೇಗ | ಕುಳಿತ ಶಂ | ಕರನನ್ನು ಒಲಿಸಲಾಗ ॥ ೩ ॥

॥ ಆರ್ಯಾಸವಾಯಿ ॥

ಚಂದ್ರ ಚೂಡ ಶಿವ ಪಾರ್ವತಿ ರಮಣ | ಅಂಧಕಾರಿ ಸುರನುತ ಚರಣ | ಬಂದೆನ್ನಯ ಮನದಿಚ್ಛೆಯ ಕರುಣಿಸು | ಬಂದಪಿಮೋಜನ ಸ್ಮರಹನನ ॥ ೧ ॥

॥ ಸೌರಾಷ್ಟ್ರ - ತ್ರಿವುಡೆ ॥

ಮಾರಹರದೋರದಿರೆ ಒಡಲನು | ಘೋರ ಪಂಚಾಗ್ನಿಯೊಳಗಿರಿಸುತ | ಭೂರಿ ತಪವನು ಮಾಡೆಕಂಪಿತು ॥ ಮೂರು ಜಗವ ॥ ೧ ॥ ಸುರರು ಋಷಿಗಳು ಬೆದರಿ ಹರನೊಳು | ಮೊರೆಯನಿಡೆ ಶಂಕರಮನಂದಿಯು | ಭರದೊಳೇರುತ ಬಂದು ನುಡಿದನು ॥ ಹರಸಿ ಖಳಗೆ ॥ ೨ ॥

ಕಾಂಭೋಧಿ - ಝಂಪೆ

ಧನುಜೇಂದ್ರ ಎದ್ದೇಳು | ಘನತಪಕೆ ಮೆಚ್ಚಿದೆನು | ಹನನವಾಗುವದೆಲ್ಲ ಜಗವು ॥ ಮನದಿಚ್ಛೆಯೇನೆಂಗು | ಎನಲೀಗ ಕೊಂಡುವೆನೆಂ | ದೆನಲೆಂದ ಕೈ ಮುಗಿದು ಮುರನು ॥ ೧ ॥ ಪರಮೇಶ್ವರನೆ ಕೇಳು | ಪುರುಷರೂಪಿಗಳಿಂದ | ಮರಣ ಬಾರದ ತೆರದಿವರವ | ಕರುಣಿಸಂದೆನಲು ಶಂ|ಕರನು ಸಂತೋಷದಲಿ | ಹರಸಿ ಪೋದನುರಜತಗಿರಿಗೆ ॥ ೨ ॥

॥ ಮಾರವಿ - ಏಕ ॥

ಹರನೊಳುವರವನು ಪಡೆಯುತದಾನವ | ಪುರದೆಡೆ ನಡೆತಂದು | ಅರುಹಲು ಜನನಿಯು ಪರಮಾನಂದದಿ | ಗುರುವರನನು ಕರೆದು ॥ ೧ ॥

ಭಾಮಿನಿ

ತರಳನಿಗೆ ಪಟ್ಟಾಭಿಷೇಕವ | ವಿರಚಿಸುತ ಪೆತ್ತವನ ದುರದಿಚ | ದಂದ ಖಳರನು ಕೂಡಿಸಲು ಡಂಗುರವ ಭಾರಿಸಲು ॥ ಅರಿತು ಭಂಡನು ವಜ್ರದಂತನು | ಪರಮ ಸಂತಸದಿಂದ ಬಂದೀ ವರಿಗೆ ವಂದಿಸಲೆಂದ ಕರ ಮುಗಿಯುತ್ತ ವಿನಯಾ ದಲಿ ॥ ೧ ॥

॥ ಸಾಂಗತ್ಯ - ರೂಪಕ ॥

ಬಂದಿರೆಲ್ಲಿಂದ ಕುಳ್ಳಿರಿ ವೀರ ಯೋಧರೆ | ಹಿಂದೆ ಯಾವೆಡೆಯೊ ಈರ್ವರನು ಕಂಡಂತ ಯೋಜನೆ ಪುಟ್ಟುತಲಿದೆ ದಯ | ದಿಂದ ಪೇಳಿರಿಯಾರೆಂದೆನುತ ॥ ೧ ॥ ಖಳ ರಾಯಲಾಲಿಸು ನಾಡಿ ಜಂಘನಮಂತ್ರಿ | ಗಳು ನಾವು ಸ್ವರ್ಗವ ಗೆಲ್ದು |

Scanned by CamScanner

ಜಲಜಾಕ್ಷ ವಾಹನ ಗರುಡನ ಯುದ್ಧ ದಿ | ಬಳಲಿ ಓಡುತಲಡಗಿದೆವು || ೨ || ಬಣ್ಣ ಗುಂದಿದ ಖಳ ರನ್ನುಕರದ ವಾರ್ತೆ | ಯನ್ನು ಕೇಳುತ ಲೀರ್ವರಿಂದು| ನಿನ್ನೆಡೆ ಬಂದೆವು ಅರಿಯದಿದ್ದಡ ಮಾತೆ | ಯನ್ನು ಕೇಳಲು ತಿಳಿವದೆಲ್ಲ || ೭ || ಒಳಿತಾಯ್ತು ಬಂದದು ಮುಂದಿನ ಸ್ಥಾನದಿ | ಕುಳಿತು ಕೊಳ್ಳಿರಿ ಈ ವರ್ರಿಂದು| ಗಳಿಸಿಹೆ ಮನವನ್ನು ಸುರ ಲೋಕ ಗೆಲಲೆನೆ | ಕಲಿಗಳು ನುಡಿದ ರಾರ್ಭಟಿಸಿ || ೪ ||

|| ಕೇದಾರ ಗೌಳ - ಝಂಪೆ ||

ಅನುಮಾನವಿದ ಕೇತಕೆ | ಮುಂದೊಮ್ಮೆ | ರಣ ಗೈದಿಹೆವು ಪರಾಕೆ | ಕಣು ಮುಚ್ಚಿ ತೆರೆವುದೊಳಗೆ | ಬವರದಲಿ | ಅನಿಮಿಷರ ನಾಕ ನಮಗೆ || ೧ || ಪರಿದಾರ ಸಿದ್ದ ಗೈದೆ | ಸುಮನಸರ | ಪುರದಲ್ಲಿ ಗೆದ್ದು ಮುಂದೆ | ಅರಸನನು ಕೊಂದ ಹಗೆಯ | ತೀರಿಸುತ | ಸಿರಿವರನ ಗೆಲ್ವರಾಯ || ೨ || ನಡೆತಂದು ಸ್ವರ್ಗವನ್ನು | ಮುತ್ತಲ್ಕೆ | ತಡೆದ ನಾಗಲೆಜಾರನೂ | ಹೊಡೆದಟ್ಟಬಂದು ಚರನು | ಪುರುಹೂತ | ನಡಿಗೆರಗು ತಿಂತೆಂದನೂ || ೧ ||

|| ಮುಕಾರಿ - ಏಕ ||

ಒಡೆಯ ನೀ ಲಾಲಿಸಯ್ಯ ನುಡಿಯ | ವೈಮಾನಿಕರಾಯ | ಒಡಯ ನೀ ಲಾಲಿಸಯ್ಯ ನುಡಿಯೂ || ಒಡೆಯನೆ ನಿನ್ನಯ | ನುಡಿಯಂದದಿ ಹೊರ | ಗಡೆಯೊಳಗಿರೆರಿಪು | ಗಡಣವು ಬಂದಿದೆ || ೧ || ದುರಳಾ ಮುರಾಸುರನೆಂಬವನು | ಚೆಂದ್ರಾವತಿ ಪುರದ | ಅರಸು ಕುಮಾರನು ತಂದೆಯನು | ತರಿದಿಹ ಹಗೆಯೊಳು | ದುರಕ್ಕೈತಂದಿಹ | ಹೊರಡಿರಿಯುದ್ಧಕೆ | ತಡೆಯಲು ಹೊಡೆದರು || ೨ ||

||ಭೈರವಿ - ಅಷ್ಟ ||

ದೂತರೆಂದುದ ಕೇಳುತ | ಅಮರಾವತಿ | ನಾಥನು ಖತಿತಾಳುತ | ಜಾತವೇದಮರರ | ವ್ರಾತವ ಕೂಡಿನಿ | ಭೀತಿಯೊಳ್ಬಂದನತ್ತ ||೧|| ಪುರದ ಬಾಹ್ಯೆಯೊಳಿರುವ | ದಾನವರಿಂಗೆ | ಸುರಿದರು ಕೆಲ ಬಾಣವ | ಪರಿಕಿಸುತಾಕ್ಷಣ | ತ್ವರ ದೊಳಗ್ನಿಯು ಭಂಡಾ | ಸುರನನ್ನು ತಡೆದೆಂದನು || ೨ || ಎಲೆವೊ ಭಂಡಾಸುರನೆ | ಪೂರ್ವ ದೊಳಿಮ್ಮ | ಕಲಹದೊಳಡಗಿದನೆ | ಖಳ ಬಲದೊಳು ಸೇರಿ | ಅಳ ವಿಗ್ನೈ ತಂದೆಯ | ಕಳುಹಾವೆಯಮ ಪುರಿಗೆ || ೩ || ಅಂದಿನ ತೆರವಲ್ಲವು | ಬೇಕಾದ ಸು | ಸಂದರ್ಭವುಡುಕಿ ನಾವು| ಇಂದು ಶೀಘ್ರ ದಿ ಯುದ್ಧ|

ಕೆಂದು ಬಂದೆವು ನಿಮ | ಗಿಂದಿದು ಕಡೆ ದಿನವು || ೧ || ಹುಟ್ಟು ಗುಣಂಗಳಿವು| ದುರ್ಭೀಜವು | ಸುಟ್ಟರು ಬೆಳೆಯುವವು | ಎಷ್ಟೊ ಖಳರು ಪರ | ಮೇಷ್ಠಿಯ ವರದಿ ಥಾ | ಳಿಟ್ಟು ಕಂಗೆಟ್ಟಹರು || ೪ || ಬಡಿವಾರ ಸಾಕೆನ್ನುತ | ದಾನವನಸ್ತ್ರ | ಗಡಣವ ಬಿಡಲು ಮತ್ತ | ಒಡನಗ್ನಿ ಖಂಡಿಸಿ | ಖಿಡಿಕಾರಿ ನೂರಾರು| ಹೊಡೆದನು ಪ್ರತಿ ಶರವಾ || ೬ || ಎಸೆದ ಬಾಣಂಗಳನೂ | ಧನಂಜಯ | ಮುಸೆದಸ್ತ್ರತತಿಗಳನೂ | ಎಸೆದು ಜೂರ್ಣಿಸಿಶರ | ವಿಸರವ ಬಿಡೆ ಕಂಡು | ಅಸುರನು ಗರ್ಜಿಸುತ || ೭ || ವೀರ ನೀ ನಹುದೆನುತ | ಭಂಡಾಸುರ | ಘೋರಶರೌಘವತಾ | ಭೂರಿ ವೇಗದಿ ಬಿಡ | ಲಾರುಭಟಿಸುತಗ್ನಿ | ಜಾರಿದ ಹಿಂದೋಡುತ || ೮ || ಹರಿ ಸೋತ ಪರಿ ಕಾಣುತ | ಕಾಲನುದಂಡ | ಧರಿಸು ತಲಿದಿರಾಗುತ | ಬರೆ ವಜ್ರದಂತನು | ಹರನಂತೆರೌದ್ರದಿ | ಭರದಿಂದ ಯಮ ಗೆಂದನು || ೯ ||

|| ಭೈರವಿ - ಏಕ ||

ದಂಡಧರನೆ ಭಳಿಭಳಿರೆ | ರಣ | ಮಂಡಲ ಕೈದೆಯಧಿರುರೆ | ಮುಂಡೆಯ ಜೂರ್ಣವಗೈವೆ | ಮರೆ | ಗೊಂಡರೆಲೇಸೈ ಬಿಡುವೆ || ೧ || ಗರುಡನ ಯುದ್ಧದಿ ಓಡಿ | ತಲೆ | ಮರೆಸಿದೆ ಎಲವೋ ಪೇಡಿ | ಸುರಪುರದಾಶೆಯೊಳ್ಬಂದೆ | ಜಯ | ದೊರಕದು ಪೋಗೆಲೊಹಂದೆ || ೨ || ಓರ್ವನ ಸಾವನು ಬಯಸಿ | ಮ | ತ್ತೋರ್ವನೊಳಾತನ ತರಿಸಿ | ಈರ್ವರ ವೃತ್ತಿಯ ಬಿಟ್ಟಿ | ಈ | ಕಾರ್ಯಕೆಬಂದೆಯ ಕೆಟ್ಟಿ || ೩ || ಖಂಡ ಪರಶು ಹರಿಯಜರು | ಈ | ದಂಡಪಾಶವಿತ್ತಿಹರು | ಹೆಂಡವ ಕುಡಿದಂಡಲೆಯು | ತಿಹ | ಭಂಡನಿಗ್ಯಾಕೀ ಕಥೆಯು || ೪ || ಭಂಡನೆಂದೊದರಲು ಜತನ | ಶಿರ | ಖಂಡಿಸಿ ಸರ್ವರ ಮರಣ | ಕೊಂಡಯ್ವವನಿಲ್ಲೆಂದು | ಭೂ | ಮಂಡಲದಲ್ಲಿಗೈವೆನಿಂದು || ೫ || ತೋರಿಸು ವಿಕ್ರಮವೆಂದು | ಯಮ | ನಾರುಭಟಿಸಿಕೊಳ್ವೆಂದು | ನೂರು ಶರವ ತೆಗೆದಿಡಲು | ಖಳ | ಕೂರಸಿಯೊಳು ತುಂಡಿಸಲು || ೬ || ಕಾಣುತ ಸೂರ್ಯನ ಸುತನು | ಬಲು | ತ್ರಾಣದೊಳಾದಂಡವನೂ | ಜಾಣತನದಿ ತಿರುಹುತ್ತ | ಇಡೆ | ದಾನವನುರುಳುತ ಸತ್ತ || ೭ || ವಜ್ರರದನ ಸುರುಳಲ್ಕೆ | ಮುರ | ಗರ್ಜಿಸಿ ಮುಂದ್ವರಿಯಲ್ಕೆ | ವಜ್ರಧರನು ನಡೆತಂದು | ಎದೆ | ಝುಜ್ಜರಿವಂದದೊಳೆಂದ || ೮ || ನಾಡೀಜಂಘನ ಸುತನೊ | ಕಾ | ದಾಡಲು ಬಂದೆಯ ನೀನು | ಖೋಡಿಯೆ ನೀಹಿಂತೆರಳು | ಚಂ | ಡಾಡುವೆ ಮುನಿದರೆ ಕೊರಳು || ೯ || ಕೇಶವನೊಳು ದೂರಿದು

ತ | ಅಸು | ರೇಶನಕೊಲಿಸಿದೆ ಧೂರ್ತ | ಆ ಸೇಡನು ತೀರಿಸಲು | ನಾ | ರೋ
ಷದಿ ಬಂದೆನು ಕೇಳು ॥ ೧೦ ॥ ಅಸುರನೆಗಳುಹುವದ್ಯಾಕೆ | ತವ | ಪೆಸರಡಗಿ
ಸುವೆನು ಜೋಕೆ | ಹೂಸಮುಸೆಯುವ ವಜ್ರದಲಿ |ಜೂ| ರ್ಣಿಸುವೆನು ಶಿರಕ್ಷಣ
ದಲ್ಲಿ ॥ ೧೧ ॥ ಹುಲುವಜ್ರಕೆ ಋಷಿಯಸ್ಸು | ನೀ | ಕೊಲಿಸಿದೆ ಮೂರ್ಖನೆ
ಯಿನ್ನು | ಸಲುಗೆಯ ಮಾತಾಡದಿರು | ನಿನ್ನ | ನುಳಿಸುವೆ ಶಿರಭಾಗಿಸಲು ॥ ೧೨ ॥
ಮೌನಿಧಧೀಚಿಯು ಲೋಕ | ಕ | ಲ್ಯಾಣಕೆ ಕೈಮಿನಿ ಲೋಕ ! ಮೌನದಿ ಸೇ
ರಲು ಖಳರ | ನಾ | ಚೂರ್ಣಿಸುತಾಳ್ವೆನುಸುರರ ॥ ೧೩ ॥ ಮುನಿಯತನುಜ
ಕೋಪದಳು | ಸುರ | ರನುಕೊಲುವೆನುತ್ತೈತರಲು | ವನಜಭವನಪದ ಸೇರಿ |
ನೀ | ಮನೆ ಮಾಡಿದ್ದೆಯ ವೈರಿ ॥ ೧೪ ॥ ಆದಿಚರಿತೆ ನಿನಗ್ಯಾಕೆ | ಹಗೆ |
ಸಾಧಿಸಲೈದಿಹೆ ಜೋಕೆ | ಸಾಧ್ಯವೊ ತಾಳೆಂದೆನುತ | ಸ್ವ | ರ್ಗಾಧಿಪ ಹೊಡೆ
ದನು ನಗುತ ॥ ೧೫ ॥ ಚೆದರದೆ ದಾನವನಾಗ | ಹೊಡೆ | ದುದ ಕಾಣುತ ತಾ
ಬೇಗ | ಮದನಾರಿಯ ತೆರದಿಂದ | ಸುರಿ | ಸಿದೆನೈ ಶರಗಳ ವೃಂದ ॥ ೧೬ ॥

॥ ಕಾಂಬೋಧಿ - ಝಂಪೆ ॥

ಸುರಪನದತರಿದು ಕೆಲ | ಶರಗಳನು ಸುರಿಸಲ್ಕೆ | ಮುರ ಖಳನು ಕತ್ತರಿಸಿ ಬ
ಳಿಕ ॥ ಸೆರೆ ಹಿಡಿದು ಸ್ವರ್ಗವನು ಹರುಷದಿಂದೇರುತ್ತ | ವರಸಿಂಹ ವಿಷ್ಟರದಿ
ಕುಳಿತ ॥ ೧ ॥ ಸುರಗಣಿಕೆಯರು ಬಂದು | ನರ್ತನವನೆಸಗಲ್ಕೆ | ಸುರಪನಂಕ
ರೆಯಿಸುತ ಖಳನು ॥ ನಿರತನಾನೋರೆದಂತೆ | ಇರಬೇಹುದೆನುತವನು | ಹರಿ
ತಂದು ಮೆರೆದಿದ್ದ ಪುರದಿ ॥ ೨ ॥

॥ ನೀಲಾಂಬರಿ - ರೂಪಕ ॥

ಶಿವಶಿವ ಎನಗೀತೆರದಲಿ | ಭವಣೆಯು ಸಂಭವಿಸಿತೆ ದಾ | ನವನಿಗೆ ಶರಣಾಗುತ
ಛಾ | ಳುವ ದಿನ ಬಂತಲ್ಲ ॥ ಭವನೂಲಿದಿತ್ತಿಹವರಬಲ | ದಿವ ಹಾರುವನವ
ನೊಳು ದೂ | ರುವೆನೆನುತ್ತೈತಂದನು ಶಚಿ | ಧವ ಕೈಲಾಸದೆಡೆ ॥ ೧ ॥ ಮು
ಕ್ಕಣ್ಣನ ದೂರದಿಕಾ | ಯಕ್ಷನು ಪರಿಕಿಸಿ ಶಂಕರ | ರಕ್ಕಸನುಪಟಳದೊಳ ನೀ |
ಭಕ್ತರ ಮೊತ್ತವನು | ರಕ್ಷಿಸು ರಕ್ಷಿಸೆನುತದ್ವಯ | ಅಕ್ಷಿಯೊಳ್ಕಂಬನಿಸುರಿ
ಸುತ | ದುಃಖಿಪ ಸುರಪನಹರ | ನೀಕ್ಷಿಸುತಿಂತೆಂದ ॥ ೨ ॥

॥ ಕೇದಾರ ಗೌಳ - ಅಷ್ಟ ॥

ಸುರಪಾಲ ಎದ್ದೇಳು ತವಹರಿಸುತಲಿನ್ನ | ಗಿರಿಯೆಡೆ ಬಂದುದೇನು | ದುರುಳರ
ಬಾಧೆಯೆ ಮರುಗುವದ್ಯಾಕಯ್ಯೆ | ಅರುಹೆಲ್ಲ ಭವಣೆಗಳ ॥ ೧ ॥

॥ ಬೇಗಡೆ - ಏಕ ॥

ಹರನೆ ಕೇಳ್ವಾನೊರೆವ ಬಿನ್ನಹವ | ಆ ನಾಡಿಜಂಘನ | ತರಳ ಮುರ ಖಳ ನಿ
ಮ್ಮೊಡನೆ ವರ ವ | ಪರಿಸಿ ಬವರದಿ ಸುರರ ಸೋಲಿಸಿ | ಪರಮ ಅಮರಾವತಿ
ಯನಾಳುವ | ದುರುಳನನು ಸಂಹರಿಸಿ ನಾಕವ | ಕರುಣಿಸೈ ನಿರ್ಜರರ ಭಾಗಕೆ
॥ ೧ ॥ ಆಗಾದಾಗದು ಎನ್ನೊಳೀಕಾರ್ಯ | ನೀನೀಗ ಕ್ಷೀರ | ಸಾಗರದ ಬಳಿ
ಸಾಗುತೀವ್ಯಥೆಯ | ನಾಗಶಯನನಗೆ ಭಾಗಿ ತಿಳಿಸಲು | ರೇಗಿ ದುರಿತವ ಹೋಗ
ಲಾಡಿಸಿ | ಸ್ವರ್ಗ ನಿಮ್ಮಯಭಾಗಗೀವನೆ | ನಾಗವಾಹನನಾಗ ಪೊರಟನು ॥ ೨ ॥

॥ ಭೈರವಿ - ಝಂಪೆ ॥

ಕಡಲ ತಡಿಯೆಡೆಗೆ ಸುರ | ರೊಡೆಯತಾನಡೆ ತಂದು | ಜಡಜಲೋಚನನೆಡೆ
ಬಿಡದೆ ಸುತಿಸಿದನು ॥ ೧ ॥

॥ ನವರೋಜು - ಏಕ ॥

ಕ್ಷೀರಸಾಗರವಾಸ | ವೈ | ದೋರೊ ಸಂಕಟನಾಶ | ನಾರದ ವಂದಿತ | ಸಾರ
ಸಲೋಚನ | ನಾರಾಯಣ ಹರಿ | ಶ್ರೀ ರಮಣೀಧವ ॥ ೧ ॥ ಭಕ್ತನ ದುಃಖ
ವ ಕೇಳಿ | ಕಮ | ಲಾಕ್ಷನು ಪಕ್ಕನೆ ಏಳಿ | ಲಕ್ಷ್ಮಿಯ ತ್ಯಜಿಸುತ | ಅಕ್ಕರೆ
ಯಲಿ ಪ್ರ | ತ್ಯಕ್ಷನಾದಕಾ | ಯಕ್ಷಗೆ ತಕ್ಷಣ ॥ ೨ ॥ ಜಂಬಾರಿ ಎದ್ದೇಳ್
ಪಾ | ಲಾಂಬುಧಿ ಗೈದುದಪೇಳು | ಕಂಬನಿಸುರಿಪುದು | ಸ್ತಂಬಿತಗೊಳಿಪ್ಪುದು |
ತುಂಬಿದ ಭವಣೆಯೆ | ನೆಂಬಲು ಪೊರೆಯುವೆ ॥ ೩ ॥ ಮುರನೆಂಬದಾನವ
ನು | ಸುರ | ಪುರವನ್ನಾಳುತಲಿಹನು | ದುರುಳರತರಿದೀ | ಸುರ ಪರಿವಾರವ |
ಪೊರೆಯೈ ಕರುಣಾ | ಕರ ಮಧುಸೂಧನ ॥ ೪ ॥ ಅಳಲದಿರುಸುರಪಾಲ | ಮ
ನ | ದಲಿ ತಾಳೈಧ್ಯೆರ್ಯಗಳ | ಅಳವಿಯೊಳ ಸುರನ | ಅಳಿಸುತ ರಕ್ಷಿಪೆ | ಪೊ
ಳಲನು ಸೇರೆನೆ | ಘಳಿಲನೆಪೋದನು ॥ ೫ ॥

॥ ಭೈರವಿ - ಝಂಪೆ ॥

ಸುರ ಪಾಲ ಹಿಂತಗಳೆ | ಸಿರಿವರನು ಗರುಡನನು | ಕರೆದೆಲ್ಲವರುಹಲಡಿ | ಗೆ
ರಗುತಿಂತೆಂದ ॥ ೧ ॥ ಶರಜಾಕ್ಷನೀನ್ಯಾಕೆ | ತೆರಳುವದನುಜ್ಞೆಯನು | ಕರು
ಣಿಸಿರಿ ಮುರ ಖಳನ | ತರಿದೀಗ ಬರುವೆ ॥ ೨ ॥ ಹರಿಯುಗೆಲಿದಗೆ ಹುಲ್ಲೆ |
ಮರಿ ಯಜಯಿಪುದು ಘನವೆ | ಸರಿಯೆ ಮೃಗರಾಯ ಮುಂ | ದ್ವರಿಯುತಿಹು
ದು ॥ ೩ ॥ ಅಪ್ಪಣೆಯ ಕೊಡಿರೆನಲು | ಸರ್ಪಶಯನನು ತಾನು | ಬಪ್ಪೆನು

Scanned by CamScanner

ತಲವರು ಖಳ | ನಿಪ್ಪೆಡಗೆ ಬಂದು || ೪ || ಹರಿಶಂಖವನು ವೊಳಗೆ | ದುರುಳ
ಕೇಳ್ದಾಕ್ಷಣ | ಚ್ಚರಿತಳೆದು ಬರೆ ಮಂತ್ರಿ | ಗರುಡನಂತಡೆದ || ೩ ||

|| ಸೌರಾಷ್ಟ್ರ - ತ್ರಿವುಡೆ ||

ಧಿರುರೆ ಭಂಡಾಸುರನೆ ಸಿಕ್ಕಿದೆ | ದುರುಳ ನಾಡೀಜಂಘನೆಸಗಿದ | ದುರದಿ ಓಡಿ
ದ ಹೇಡಿ ಬಂದೆಯ || ತರಿವೆನಿಂದು || ೧ || ಹಿಂದೆ ಅಡಗಿದರೇನೊ ಶಕ್ತಿಯ |
ನಿಂದು ಹೆಚ್ಚಿಸಿ ದುರದಿ ನಿನ್ನನು | ಕೊಂದು ಸೇಡನು ತೀರಿಸಲಿಕ್ಕೈ || ತಂದಿರು
ವೆನು || ೨ || ಗಳ ಹದಿರು ಮೂರ್ಖರೊಳು ಮೂರ್ಖನೆ | ಕಲಹದೊಳಗ ಮ
ರರನು ಗೆಲ್ದಹೆ | ಗ್ಗಳಿಕೆಯೊಳುನಡೆದ್ಯೆದೆ ಹಿಂದಕೆ || ಘಳಿಲ ಪೋಗು || ೩ ||
ಪಕ್ಷಿಸಾಕೆಲೊ ವಿಕ್ರಮಂಗಳು | ರೆಕ್ಕೆಯನು ತರಿದಿಕ್ಕಿ ನಿನ್ನಯ | ಸೊಕ್ಕ
ಮುರಿವೆನು ಲಕ್ಷ್ಮಿ ರಮಣನ || ಲೆಕ್ಕಿಸುವೆನೆ || ೪ || ತೋರು ನಿನ್ನಯ ಶೌ
ರ್ಯವೆನ್ನುತ | ಹಾರಿ ಗರುಡನ ಹೊಡೆಯೆದಾನವ | ಕೂರಸಿಯನೆಸೆಯಲ್ಕಿಕ
ಡಿದನು || ವೀರನಾಗ || ೫ || ಬಳಿಕ ಶರಗಳ ಖಳನುಹೂಡಲು | ಘಳಿಲ ಕತ್ತ
ರಿಸುತ್ತ ಲಾತನ ತಲೆಯ ಖಂಡಿಸೆ ಹೊರಳಿ ಬಿದ್ದನು || ಇಳೆಯೊಳವನು || ೬ ||
ಭಂಡ ದಾನವ ಸಂಗರದಿ ಭೂ | ಮಂಡಲದಿ ಬೀಳಲ್ಕೆ ಖಳ ಪತಿ | ಕಂಡು
ಖಾತ್ರಿಯ ಗೊಂಡು ಸುರಪನಿ | ಗೆಂದ ಬಂದು || ೭ ||

|| ಪಂಚಾಗತಿ - ಮಟ್ಟೆ ||

ಭಲರೆ ವೈನತೇಯನೆನ್ನ | ಬಲವನೆಲ್ಲಕಲಹಮುಖದಿ | ಗೆಲಿದಿಯೆಂದು ಬಂದೆ
ಬಿಂಕ | ತಳೆದು ಬವರಕೆ || ಜಲಜನಾಭನೆಂದನುಡಿಗೆ | ಸಿಲುಕುತಳಿಯಬೇಡ
ಪಿಂತೆ | ರಳುವದೊಳಿತುಮಲೆತರೀಗ | ತಲೆಯಕೊಂಬೆನು || ೧ ||

|| ಸಾವೇರಿ - ಮಟ್ಟೆ ||

ತಂದೆಯನ್ನು ಕೊಂದ ಹಗೆಯೊ|ಳಿಂದು ಬಂದೆಯಾ | ಹಂದೆ ಬೆದರಿ ಹಿಂದೆ ಪೋ
ಪೆ|ನೆಂದು ನೆನೆದೆಯಾ || ಇಂದ್ರಸುರರ ವೃಂದಗೆಲಿದ|ಅಂದವೇನೆಲಾ | ಚಂದ್ರ
ಮೌಳಿ ಬಂದರಳುಕೆ | ನಿಂದು ನೋಡಲಾ || ೧ ||

|| ಕೇದಾರ ಗೌಳ - ಝಂಪೆ ||

ಹರಣನೀಗದ ತೆರದಲಿ | ಪಡಿದಿರುವೆ | ವರವ ಪರಮೇಶ್ವರನಲಿ | ಗರುಡ ನೀ
ಬಗುಳಲೇಕೆ | ದುರಕೆ ಹಿಂ | ಜರಿವನಿವನಲ್ಲ ಜೋಕೆ || ೧ || ಮೇರುಗಿರಿಹತ್ತಿ
ದವಗೆ | ಕಿರುಬೆಟ್ಟ | ವೇರಲಸದಳವೆಜುನುಗೆ | ಆರು ಭಟಿಸದೆ ಖೂಳನೆ | ಬೇ

ಗನಿ | ಸ್ಸೋರಸೇರೆಲೊದನುಜನೆ || ೨ || ಹಾರದಿರು ಪಕ್ಷೀಂದ್ರನೆ | ನಿನ್ನ ಹಂ|
ಕಾರ ನಿಲಿಸುವೆಘಮ್ಮನೆ | ಕೂರಸಿಯೊಳಿರಿದು ಕ್ಷಣದಿ | ಭೂತ ಪರಿವಾರ ಕುಣಿ
ಸುವೆನು ಮುದದಿ || ೩ || ಸಾಕುಸಾಕೆನುತಪಕ್ಷೀ | ಯಮನೆಡಗೆ | ನೂಕು
ವೆನು ಪೋಡನುತಕುಕ್ಕಿ | ರಾಕ್ಷಸಗೆ ಹೊಡೆಯಲಾಗ | ತಿರುಗಿ ಶರ | ನೀಕವೆ
ಸೆದನು ಮುರನು ಬೇಗ || ೪ || ಮುರ ನಸ್ತ್ರವನು ಖಂಡಿಸಿ | ಹಿಂತಿರುಗಿ |
ಗರುಡನೊಂದೇಟ ಬೀಸಿ | ದುರುಳಗಿಡೆ ತಪ್ಪಿಸುತ್ತ | ಮುಖಕಿಡಲು | ಹರಿ
ಡಿಂಗರಿಗನು ಸೋತ || ೫ || ವಿನುತೆ ಸುತನ ಪಜಯವನು | ಪೊಂದಲ್ಕೆ | ವ
ನಜ ಲೋಚನ ಕಂಡನು | ಕ್ಷಣದೊಳಾಯುಧವಾಂತನು | ಮುಂದ್ವರಿಯೆ |
ದನು ಜತಾತಡೆದೆಂದನು || ೬ ||

|| ನಾದನಾಮ ಕ್ರಿಯೆ - ಅಷ್ಟ ||

ಬಂದೆಯ ವೈಕುಂಠವಾಸನೆ | ಎನ್ನ | ತಂದೆಯ ಕೊಲಿಸಿದ ಮೂರ್ಖನೆ | ಹಿಂ
ದೆ ತಮನ ಮತ್ಸ್ಯ ರೂಪವ | ಪೊಂದಿ | ಕೊಂದದ್ಯಾಕೆಲೊಪೇಳು ಕಥನವ
|| ೧ || ನಿನ್ನೆಯೊ ಮುರನೆಂಬ ದನುಜನು | ವೈ | ಮಾನಿಕರನು ಸೋಲಿಸಿದ
ವನು | ದಾನವತಮ ವೇದ ಒಯ್ದುನು | ಮತ್ಸ್ಯ | ನಾನಾಗಿ ಶ್ರುತಿಯ ರಕ್ಷಿ
ಸಿದೆನು || ೨ || ಕುಂದರದನ ಮಧುಸೂದನ | ದಿತಿ | ಕಂದನಾಗಿಹ ಹಿರಣ್ಯಾ
ಕ್ಷನ | ಹಂದಿ ರೂಪವನಾಂತು ದುರದಲಿ | ಮೂಢ | ಕೊಂದದ್ಯಾಕರು ಹೇಲ
ಜವದಲಿ || ೩ || ಧರಣಿಯ ಸೂರೆ ಗೈದ ಸುರನ | ಕೊಲ್ಲು | ವರೆ ಕ್ರೋಡ
ವೇಷವನಾಂತೆನಾ | ತರಿದು ದಂತದಿ ಪಿಡಿದೆತ್ತುತ | ವಸುಂ | ಧರೆಯನ್ನುಕಾ
ಯ್ದೆನಾನೆಲೆ ಧೂರ್ತ || ೪ || ಕೇಶವ ನಿಜ ವೇಷ ತ್ಯಜಿಸುತ | ಬಲು |
ಮೋಸದಿನರಿ ಹರಿಯಾಗುತ | ಕಾಶ್ಯಪಕುವರನ ಸ್ತಂಭದಿ | ಬಂದು | ಘಾಸಿ ಗೈ
ದ್ಯಾಕೆಲೊಬವರದಿ || ೫ || ತನಯ ಪ್ರಹ್ಲಾದಗೆ ದುರಿತವ | ಕಾಶ್ಯ | ಪಣುಗ
ನು ಕೂಡುತಿರೆ ತಿಳಿದಿವ | ಮನುಜ ಕೇಸರಿಯಾಗಿ ಕಂಬದಿ | ಬಂದು | ಹನ
ನ ಗೈದಿರುವನು ಶೀಘ್ರದಿ || ೬ || ಸುರರಸುರರು ಸೇರಿ ಮಥನವ | ಮಾಡು|
ತಿರಲುದ್ಭವಿಸಿದ ಪಿಯೂಷವ | ತರುಣಿ ಮೋಹಿನಿಯಾಗಿ ಮೋಸದಿ | ಬರ್ದಿ |
ಲರಿಗಿತ್ತದ್ಯಾಕೆ ಲ ಮೋದದಿ || ೭ || ಸುಮನಸರಾಗಾಗೆ ಬಾಧಿಪ | ಖಳ | ಸ
ಮುದಾಯವನುವಂಚಿಸುತ ಗೌಪ್ಯ | ದಮರರಿಗಿತ್ತೆನು ಸುಧೆಯನು | ಬಲು |
ಮಮತೆಯೊ ಳ್ ಸ್ತ್ರೀ ರೂಪದಲಿ ನಾನು || ೮ || ಒರೆಯದಿರೆ ಲೊಹರಿ
ವಾಮನ | ರೂಪ | ಧರಿಸುತ್ತ ವೀರ ಬಲೀಂದ್ರನ | ಧರಣಿಯಾಚಿಸಿ ಕೇಳ

Scanned by CamScanner

ಲೋಕಕೆ | ನಿನ್ನ | ಚ ರಣದೊಳಾಕಿದುದ್ಯಾತಕೆ || ೯ || ವೃತ್ರಾರಿ ಗುಪಟಳ
ವನ್ನಿತ್ತ | ಬಲಿ | ದೈತ್ಯನೊಳ್ ನೆಲವನು ಬೇಡುತ | ಒತ್ತುತ್ತ ತೋರಿದೆ
ಪಾತಾಳ | ನಿನ | ಗ್ಯಾತಕೀ ಕಥೆಗಳು ಪೋಗೆಲ || ೧೦ || ಈ ರೀತಿ ಖಳ ವಂ
ಶ ತರಿದೀರ್ಪ | ಹಗೆ | ತೀರಿಸಲೋಸುಗ ಬಂದೀರ್ಪೆ | ಭೂರಿ ಪರಾಕ್ರಮ
ತೋರೆಂದು | ಶರ | ವಾರವ ಸುರಿಸಿದ ಮುರನಂದು || ೧೧ || ಹೂಡಿದಬಾಣ
ವ ಮಾಧವ | ಚೆಂ | ಡಾಡುತಪ್ರತಿ ಶರವಾರವ | ನಾಡೀ ಜಂಘೆಣುಗನಿಗೆಸೆ
ಯಲು | ತುಂಡು | ಮಾಡಿದ ಮುರನು ಸಾಹಸದೊಳು || ೧೨ ||

ವಾರ್ಧಿಕ

ಧರಣಿ ಪಾಲಕಕೇಳು ಮುರನೊಡನೆ ಬವರದಲಿ | ಎರಡೈದು ಹಗಲಿರುಳು ಮಾ
ಧವಗೆ ಜಯನಾರಿ | ದೊರಕದಿರೆ ಹಿಂತಿರುಗಿತುಹಿನಾದ್ರಿಯಲ್ಲಿರುವ ಬದರಿಕಾ
ಶ್ರಮವ ಸೇರಿ | ಪರಿಕಿಸುವ ಹೇಮಾವತೀ ಗುಹೆಯ ಪೊಕ್ಕುತ್ಯಾ | ರರಿಯದಂ
ದ ದೂಳಿವನು ಹಲವಿಧದಿ ಚಿಂತಿಸುತ | ಪರಮೇಶ್ವರಿಯು ಸ್ಮರಿಸಿದನು ವಾರಿ
ಜಾಸನವ ಬಲಿದು ಬಲು ಭಕ್ತಿಯಿಂದ || ೧ ||

|| ಮೋಹನ - ಏಕೆ ||

ನಮೋ ಶಂಕರಿ ವೈರಿ ಭಯಂಕರಿ | ನಮೋಹ್ರೀಂಕಾರಿ || ದ್ಯುಮಣಿ ಪ್ರಕಾಶಿತೆ
ಭ್ರಮರಿ ಭಗವತೀ ಕುಮುದ ನೇತ್ರೆ ಗೌರೀ | ಮಹೇಶ್ವರಿ || ೧ || ಶುಂಭಾಂ
ತಕಿ ಶಾಕಂಭರಿ ತವಪಾ | ದಾಂಬುಜ ಸೇರಿದೆನು | ನಂಬಿದ ಭಕುತನಿಗಿಂಬನು
ಕರುಣಿಸು | ಬೆಂಬಿಡದಲೆ ತಾಯೆ | ಮಹಮ್ಮಾಯೆ || ೨ ||

ಭಾಮಿನಿ

ಪುಂಡರೀಕಾಂಬಕನು ಶ್ರೀ ಚಾ | ಮುಂಡಿಯಂ ಭಕ್ತಿಯಲಿ ಪಾರ್ಥಿಸೆ | ಚಂ
ಡಕರನಂ ಪಳಿವತೇಜದೊಳಷ್ಟಭುಜ ಸಹಿತ || ಚಂಡಿಕೆಯು ಮೈ ದೋರೆ ಸಂ
ತಸ | ಗೊಂಡು ಮಂಡೆಯ ಭಾಗಿಸಲು ಬ್ರ | ಹ್ಮಾಂಡ ನಾಯಕಿ ಕ್ಷೀರ ಸಾಗ
ರ ವಾಸಗರುಹಿದಳು || ೧ ||

|| ಕಾಂಬೋಧಿ - ಝಂಪೆ ||

ಶ್ರೀ ರಮಣ ಎದ್ದೇಳು | ಆರಣ್ಯದೆಡೆ ಬಂದು | ಈ ರೀತಿಯಿಂದೆನ್ನನುತಿಪ ||
ಕಾರಣವ ಪೇಳೆನಲು | ನಾರಾಯಣಾಕ್ಷಣದಿ | ಸಾರ ಸಾಕ್ಷಿಯೊಳೆಂದ
ನಾಗ || ೧ || ಜನನಿ ಕೇಳ್ಮುರ ನೆಂಬ | ದನು ಜನಿಂದ ಪಜಯವಿ | ದೆನಗಾ
ಯ್ತು ಮುಂದಿನ್ನು ಖಳನ | ಹನನ ಗೈಯ್ಯುವಯತ್ನ | ಮನಕೆ ತೋಚದೆ

ನಿನ್ನ ! ನೆನೆದೆನ್ನೈ ಉಳಿ ಸೆನ್ನಪೆಸರ || ೨ ||

ಭಾಮಿನಿ

ಆಳುಕದಿರು ನೀ ನಿಲ್ಲೆ ಮಲಗಿರೆ | ಖಳನು ಪುಡುಕುತ ಬರುವ ನೀಗಲೆ |
ಪಳಿವ ನಿನ್ನಾನನದಿ ನಾ ಸಂಭವಿಸಿ ದಾನವನ || ಕಲಹದಲಿ ಸಂಹರಿಸಿ ರಾಕ್ಷಸ|
ಕುಲಕುಠಾರಕನೆಂಬ ಬಿರುದನು | ಉಳಿಪೆ ನೆಂದಪಗಲ್ಕೆ ನಿದ್ದೆಯೊಳಿದ್ದ ಮಾಧ
ವನು || ೧ ||

|| ಕಂದ ||

ದಾನವ ಶ್ರೀ ಮಾಧವನಂ | ಕಾನನ ಕಾನನ ದೊಳರ ಸಿಜವ ದಿನಡೆತಂದು |
ಕಾಣುವಹಿಮಗಿರಿಯೊಳ್ನಿದ್ರಾ | ಮಾನುನಿಯನಾಲಂಗಸಿದ್ಧವನ ಕಂಡೆ
ಂದ || ೧ ||

|| ಮಾರವಿ - ಅಷ್ಟ ||

ಯಾಕಯ್ಯ ಮಲಗಿರುವೆ | ಲೋಕಯ್ಯ ನೀ | ನ್ಯಾಕಯ್ಯ ಮಲಗಿರುವೆ |
ಲೋಕ ಮೂರರೊಳು ನೀ | ನೇಕ ಸಾಹಸಿಯಂತೆ | ಯಾಕಯ್ಯ ಮಲಗಿ
ರುವೆ || ಪಲ್ಲ || ಸಾಕಾಯ್ತೆ ಬವರವೆನ್ನೊಡನೆ | ನಿನ | ಗ್ಯಾಕೆ ಬೇಕಾಯ್ತು
ಮಾಧವನೆ | ಮೂರ್ಖರ ರೀತಿ ಯೊ | ಳೀ ಕಾರ್ಯ ಕೈಕೊಂಡೆ | ಯಾರ್ಕ
ಲಿಸಿದರಿದನು | ರಾಕ್ಷಸರನು | ನೀರ್ಕುಡಿಸಿದನು ನೀನೂ | ತೋರಯ್ಯಪ |
ರಾಕ್ರಮ ತನಗಳನೂ | ಮೆಚ್ಚಿದೆ ನಿನ್ನ| ಈ ಕೃತ್ಯಗಳಿಗೆ ನಾನು || ೧ || ದುರ
ದೊಳು ಮಧು ಕೈಟಭರನು | ಮೊಸ | ದಿರಿದು ಕಾಶ್ಯಪತನುಜರನು | ನರ
ಪ್ರಾಣಿಯಲ್ಲದ ತೆರ ದೂಪ ಧರಿಸಿ ಸಂ| ಹರಿಸಿದ ಅದಮ ನೀನೂ | ಪಕ್ಷಿಯೊಳ
ಂದು| ಇರಿಸಿದೆ ಜನಕನನು | ಆ ವೈರವ | ಪರಿಪೂರ್ಣ ತೀರಿಪೆನು | ಈ ವೇಳ್ಯ
ದಿ |ಕರತಡವನ ನೊಪ್ಪೆನು || ೨ ||

ವಾರ್ಧಿಕ

ಎಂದು ಸುರಿ ದಾನವನು ಖಡ್ಗವಂಪಿಡಿದೆತ್ತಿ | ಇಂದಿರೇಶನ ಕಂದರವನೀಗ
ತುಂಡಿಸುವೆ | ನೆಂದು ಅನುವಾಗಲ್ಕೆ ಮಾಧವನ ಮುಖ ಕಮಲದಿಂದಲತಿ
ಶೀಘ್ರದಿಂದ || ಇಂದ್ರಾದಿ ಸುರನಮಿತೆ ಕೋಟಿ ಮಾರ್ತಾಂಡ ಪ್ರಭೆ | ಯಿಂ
ದಷ್ಟ ಭುಜದೊಳಾಯುಧ ಸಹಿತ ಸಂಜನಸಿ | ಅಂಧ ಚರನಂ ತಡೆಯುಕ
ಮನೀಯ ರೂಪೆಯಂ ಕಂಡೆಂದ ನಲವಿನಿಂದ || ೧ ||

|| ಭೈರವಿ - ಝಂಪೆ ||

ಜಡ ಜಾಕ್ಷಿ ನೀನಾರು | ನುಡಿಪೆಸರ ಮಾಧವನ | ಕಡಿವಾಗ ಬಂದೆನ್ನ | ತಡೆ
ದ್ಯಾಕೆ ವೇಳು || ೧ || ಜನಕ ನೀತನು ಎನಗೆ ದನುಜ ನಿನ್ನನು ಕೊಲಲು |

Scanned by CamScanner

ಜನಿಸಿ ದೀಕ್ಷಣದಿ ಬೇ | ಗನು ವಾಗೊದುರಕೆ || ೨ || ಮೂರು ಲೋಕದೊಳೆ ನ್ನ | ಗಾರು ಗೆಡಿಸುವರಿಲ್ಲ | ಮಾರ ನಂಧಿಕ್ಕರಿಪೆ | ಬಾರೆನ್ನವರಿಸೆ || ೩ || ಮು ಚ್ಚು ಮುಚ್ಚಿಲಬಾಯ | ಹುಚ್ಚರಂದದೊಳೊದರೆ | ಅಚ್ಚ ಕೂರ್ಗಣೆಯನೀ | ಗೆಚ್ಚು ಕೊಲ್ಲುವೆನು || ೪ || ಎನಗೆ ನೀನೇನೆಲು | ಮುನಿಸಿಲ್ಲ ನಿನಗಾಗಿ | ಮನ ಸೋತೆ ಬಾರೆಲೆರ | ಮಣಿಯಾಗೆ ಜಾಣೆ || ೫ || ಮದ ಮುಖನೆ ನಿ ನ್ನಂತೆ | ಅಧಮ ಮಹಿಷನು ನುಡಿದು | ಪದುಮ ಸಖನಾತ್ಮ ಜನ | ಸದನ ವನು ಸೇರ್ದ || ೬ || ಆವನಂತೆ ನಾನಲ್ಲ | ಶಿವನೊಡನೆ ವರಗಳಿಸಿ | ರುವೆ ಮೂರು ಜಗದಿ ಮಲೆ | ವವರಿಹರೆ ಎನಗೆ || ೭ || ಭಂಡೆಸಾಕೆಲೊ ಚಂಡ | ಮುಂಡಶುಂಭರ ಕೊಂದು | ಅಂಡಲೆವ ನಿರ್ಜರರ | ತಂಡವನು ಪೊರೆದೆ || ೮ || ತರುಣಿ ಸಾಕೆಲೆ ಎನ್ನ | ವರಿಸದಿದ್ದರೆ ಬಲ | ತ್ಕರಿಸುವೆನು ಮಾತಿ ನೊ | ಹುರುಳಿಲ್ಲ ಜತನ || ೯ || ಧೂರ್ತ ನಿಂತಿರುಹಲ್ಕೆ | ಬಾತಿಯೊಳು ಜ ಗದಂಬೆ | ಆತುಕೊಳ್ಳೆನು ಶರ | ವ್ರಾತವನು ಬಿಡಲು || ೧೦ || ದಾನವನು ನಸು ನಗುತ | ಮಾನಿನಿಗೆ ಶರವೆಸೆಯೆ | ಚೂರ್ಣಿಸುತಳಂಬಿಕೆಯು | ಮೀನ ಧ್ವಜಹರನ || ೧೧ || ತೆರದಿಂದ ಶೂಲದೊಳು | ಮುರ ಖಳನ ಕೊರಳ ಕ | ತ್ತರಿಸೆಸುಮ ಮಳೆ ಸುರಿಸಿ | ದರು ಅಮರರಾಗ || ೧೨ ||

|| ಸಾಂಗತ್ಯ - ರೂಪಕ ||

ವೈಕುಂಠ ಪತಿಯೆಂದ ಮೋಕ್ಷ ದಾಯಕಿ ಖಳನ | ನೀ ಕೊಂದ ಕಾರಣ ಸುರ ರ | ನೀಕಕ್ಕೆ ಸುಖ ವಾಯ್ತು| ಏಕಾದಶಿಯು ಯಿಂದು | ಲೋಕದೊಳಿಹ ಜ ನರೆಲ್ಲ || ೧ || ನಿರತ ಏಕಾದಶಿ ದೇವಿಯೆನ್ನುತ್ತ ನಿನ್ನ | ಕರೆವರು ಮುಂದಕೀ ವ್ರತವ | ಕೊರತೆಯಿಲ್ಲದೆ ಮಾಡುವರಿಗೆ ವೈಕುಂಠವು | ಸ್ಥಿರವಾಗಿ ದೂರ ಕಲೆಂ ದೊರೆಯೆ || ೨ || ನಳಿನಾಕ್ಷಿ ಹರಸುತ್ತ ಅದೃಶ್ಯವಾಗಲು | ಹರಿಯ್ಯ ವೈಕುಂಠವ ಸೇರಿ | ಸಿರಿಯೊಳೆಲ್ಲವ ಪೇಳಿ ಹರುಷದಿಂದಿದ್ದನು | ಅರುಹುವೆ ಮುಂದಿನ ಕಥೆಯ || ೩ ||

|| ಸೌರಾಷ್ಟ್ರ - ತ್ರಿಪುಡೆ ||

ಧರೆಯೊಳುತ್ತಮವಾದ ಚಂಪಕ | ಪುರವ ವೈಖಾನಸನೆನುವ ನೃಪ | ಹರಿಯ ಕೃಪೆಯೊಳಗಾಳುತಿದ್ದನು ಭರಿತ ಸುಖದಿ || ೧ || ಕ್ರೂರ ವೈರಿಗಳೆಂಬ ವಾರ ಣ | ವಾರಕೇ ಕಂಠೀರ ದೋಪಮ | ಸಾರಯುತ ಸಿರಿ ಬಂದನಲ್ಲಿಗೆ || ನಾರ ದಾಂಕ || ೨ ||

|| ಕೇದಾರ ಗೌಳ - ಅಷ್ಟ ||

ಸುರ ಮುನಿಯನ್ನು ಕಂಡು ಚರಣ ಕೊಂದಿಸು ತುಪ | ಚರಿಸುತ ಜನಪಾಲ ನು | ಪರಮ ಪಾವನನಾದೆ ಪುರದೆಡೆ ಬಂದು ದೇ|ನರು ಹಿರಿ ಸಂಗತಿಯ ||೧|| ಧರಣಿ ಪಾಲಕ ನಿನ್ನ ರಾಜೋಪಚಾರಕೆ | ಪರಮ ಸಂತಸವಾಂತೆನು ಧರೆಯೊ ಳು ನಿನ್ನ ಪೋಲುವರಿಲ್ಲ ಧರ್ಮದೊ | ಳರಿತು ಬಂದೆನು ಕಾಣಲು || ೨ || ಸುರಮುನಿವರ ಕೇಳು ನರಜನ್ಮಸ್ಥಿರವಲ್ಲಾ | ದರೆ ಸುಲಭದಿ ಹರಿಯ | ಚರ ಣ ಸೇರುವ ಹಾದಿಯರುಹ ಬೇಕೆನಲಾಗ | ಸರಸಿ ಜಭವಜನೆಂದ || ೩ ||

|| ಬೇಗಡೆ - ಏಕ ||

ಮೇಧಿನಿಪ ವೈಖಾನಸನೆ ಕೇಳು | ವೈಕುಂಠ ಸೇರುವ | ಹಾದಿಯನು ಪೇಳು ವೆನು ಸುಲಭದೊಳು | ಮೋದದೊಳು ವ್ರತದೊಳಗೆ ಉತ್ತಮ | ವಾದ ಏಕಾ ದಶಿಯ ವಿರಚಿಸೆ | ಮಾಧವನ ಲೋಕವನು ಪೊಂದುವೆ | ಸಾಧನೆಯೊಳದನೆ ಸಗು ಶೀಘ್ರದಿ || ೧ || ದಶಮಿಯೊಳ ಗೊಂದೂಟದೊಳಗಿರ್ದು| ಉಪವಾಸವ ಗಳೊಲು | ನಿಶಿಯ ಕಾಲವ ಕೀರ್ತನೆಯೊಳ್ಕಳದು | ಕುಶಲದಿಂ ಸಂತೋಷ ದಲಿ ದ್ವಾ | ದಶಿಗೆ ಭೂತಳ ಸುರರ ಪೂಜೆಯ | ನೆಸಗಿ ದಕ್ಷಿಣೆದಾನ ವರ್ಜಿ ಸಿ | ಬಿಸಜನಾಭನ ಪುರವ ಸೇರುವೆ || ೨ ||

ಭಾಮಿನಿ

ನುಡಿದು ನಾರದ ತೆರಳಲಿತ್ತಲು | ಪೊಡಿಸಿದನು ಡಂಗುರುವ ನಗರದಿ | ಬಿಡದೆ ಚಾತುರ್ವರ್ಣದವರೀ ವ್ರತವ ವಿಧಿಯಂತೆ || ನಡೆಸಲೆನಲೆಲ್ಲವರು ತೋಷದಿ | ಜಡಜಲೋಚನ ಹರಿಯ ವ್ರತವನು | ನಡಗರದೊಳಾ ಚರಿಸುತಿದ್ದರು ಏನನು ಸುರುವೆನು || ೧ ||

|| ಸೌರಾಷ್ಟ್ರ - ತ್ರಿಪುಡೆ ||

ಇತ್ತ ಜೈಮಿನಿ ಯರಸ ನೋಲಗ | ವಿತ್ತು ಸತ್ತರ ಲೆಕ್ಕಪತ್ರವ | ಚಿತ್ರ ಗುಪ್ತ ನ ಕರೆದು ಕೇಳಿದ || ಉತ್ಸಹದಲಿ || ೧ || ಚಿತ್ರ ಗುಪ್ತನೆ ಮಾನವಾಧ್ವರ| ಮೊತ್ತದಲಿ ಪಾಪಾದಿ ಪುಣ್ಯವ | ಕೃತ್ಯವನು ಬಿತ್ತರಿಸಿರೆನಲವ || ನುತ್ತರಿಸಿ ದ || ೨ || ಅರಸಲಾಲಿಸು ಪೆತ್ತವರಧಿ | ಕ್ಕರಿಸಿ ನಡೆದವನಿವನು ಪರಧನ | ತ ರುಣಿಯರನಪಹರಿಸಿವದನೆಂ || ದೊರೆಯಲೆಮನು || ೩ || ಶೂಲಕೇರಿಸಿರಿವರ ನಮ್ಮಯ | ಆಲಯಕೆ ಬಹರಾರು ಉಳಿದರು | ಪೇಳಿರೆನ್ನಲು ನುಡಿದ ಕ ರಣಿಕ | ಲೋಲನಿಂಗೆ || ೪ || ಪರಿಕಿಸುತಲಿಂತೇದ ನಮ್ಮಯ | ಪುರಕೆ ಧಾತ್ರಿಯೊಳಿರುವ ಚಂಪಕ | ಪುರದರಸ ಬರಲಿಹನು ನಾಮವು || ಧರ್ಮ

ಸೇನ ‖ ೫ ‖ ಕ್ಷಿತಿಯೊಳುತ್ತಮು ಧರ್ಮಯುತ ಶ್ರೀ | ಪತಿ ಭಜಕನುತು ಭಂ
ಗವಾತನ | ಸತಿಗೆ ಗೈದಿಹ ನೆನಲು ಜೈಮಿನಿ ‖ ಪತಿಯು ಸುಡಿದ ‖ ೬ ‖ ಪರಿ
ಕಿಸುವ ದೇನಾತನನು ಧರ | ಧರನೆ ಪಾಶದಿ ಬಿಗಿದು ತಾರೆಂ | ದರುಹೆ ದೂತ
ರು ಕ್ಷಣದಿ ಚಂಪಕ ‖ ಪುರಕೆ ಬಂದು ‖ ೭ ‖ ಕಾರ್ಯದೊಳುತಲ್ಲಿನರಾಗ
ಲು | ಶ್ರೀಯ ರಸ ನಾಚರರು ದೂತರ | ಗಾಯ ಗೊಳಿಸುತ ಕಳುಹೆ ಪೇಳ್ದ
ರು ‖ ಸೂರ್ಯಸುತಗೆ ‖ ೮ ‖

‖ ಸಾರಂಗ - ಅಷ್ಟ ‖

ತರಣಿಜಲಾಲಿಸಯ್ಯ | ನಿನ್ನಯ ದೂತ | ರರುಹುವ ಸುಡಿಯಜೀಯ | ಅ
ರಸ ನಿಮ್ಮಾಜ್ಞೆಯ |. ಧರಿಸಿ ನಾವೆಲ್ಲರು | ಪುರ ಚಂಪಕವ ಸೇರೆ | ಹರಿದುದ
ನೇನೆಂಬೆ ‖ ೧ ‖ ಅರಸ ವೈಖಾನಸನು | ಹರಿ ವೃತವನಾ | ಚರಿಸುತಲಿಹನು
ನಾನು | ವೊರೆದನ ತರಲು ಶ್ರೀ | ಯರಸನ ದೂತರು | ಪರಿ ಪರಿ ಶಿಕ್ಷಿಸಿ ಹರಿ
ಸಿದರೆಮ್ಮನು ‖ ೨ ‖

‖ ಕೇದಾರ ಗೌಳ - ಝಂಪೆ ‖

ದೂತರೆಂದುದ ಕೇಳುತಾ | ಸೂರ್ಯ ಸಂ | ಜಾತ ಖಾತಿಯ ತಾಳುತ | ಮೃ
ತ್ಯುವನು ಕಳಿಪೆನೆಂದು | ಕರೆಯೆನಿ | ಭೀರ್ತಿಯೊಳಗೆಂದಳ್ಬಂದು ‖ ೧ ‖ ಅಗ್ರ
ಜನೆ ಏನಿದೇನು | ಗರ್ಜಿಸುತ | ಉಗ್ರದೊಳು ಎನ್ನ ನೀನೂ | ಭರ್ಗನಂದ
ದೊಳು ಸಭೆಗೆ | ಕರೆಸಿದುದ | ಶೀಘ್ರದೊಳಗುಸುರು ಎನಗೆ ‖ ೨ ‖

‖ ಸೌರಾಷ್ಟ್ರ - ತ್ರಿವುಡೆ ‖

ಮೃತ್ಯು ಕೇಳೆಲೆ ಧರ್ಮಸೇನನ | ನಿತ್ತರೆ ತೆರಳಿರುವ ನಮ್ಮಯ ! ಮೊತ್ತವ
ನು ಬಡಿದಟ್ಟಿರುವ ರೈ ‖ಪೃಥ್ವಿನರರು ‖ ೧ ‖ ಅಪ್ಪಣೆಯನೆನಗೀಯೊ ಧರೆ
ಯೊಳ | ಗಿಪ್ಪ ರಾಜನತರಿದುಪಾದಕೆ | ಒಪ್ಪಿಸುವೆ ತಡೆದವರ ನಿಮಿಷದಿ ‖
ದರ್ಪ ಮುರಿದು ‖ ೨ ‖ ಎನುತ ಕಳುಹಲು ಚಂಪಕಾ ಪುರ | ವನು ಮುಸುಕೆ
ಹರಿದೂತರನು ಅರೇ | ಕ್ಷಣದಿ ಓಡಿಸೆ ಹರಿಯ ನೆನೆಯುತ ‖ ಜನಪ ತಡ
ದ ‖ ೩ ‖

‖ ಮಾರವಿ - ಏಕ ‖

ಆರೆಲೆದಾನವಿ ಚಂಪಕ ನಗರದ | ಧಾರುಣಿಯೆಡೆ ಗೈದು | ಭೂರಿ ಪರಾಕ್ರಮ
ತೋರುವೆ ನಿನ್ನಯ | ಹೀರುವೆ ಪ್ರಾಣವನು ‖ ೧ ‖ ಹುಲು ಮಾನವ ನೀನೆ
ಮ್ಮಯ ಸೈನ್ಯವ | ಗೆಲಿದಿಹೆನೆಂದೆನುತ | ಗಳ ಹದಿರೀಗಲೆ ನುಂಗುವೆರದನಕೆ |

ಸನುದ ರೀತಿಯೊಳು ‖ ೨ ಬಿಡು ಬಿಡಿವಾರವ ಪಿಡಿದಿಹ ಖಡುಗದಿ | ಕಡಿಯು
ತ ಭೂತಗಳ | ಗಡಣಕೆ ಜೌತಣ ಬಡಿಸುವೆ ಪಾತಕಿ | ನಡೆಯೊಲೊ ಇ
ಲ್ಲಿಂದ ‖ ೩ ‖ ಹ.ಡುಗನೆ ನೀನೇ ನರಿತಿಹೆತ್ರಿದಶರು | ನಡುಗುವರೆನಗಾಗಿ ಬಡ
ಕುರಿಯೋಪಮ ತರಿಯುತ ಪಿತನನು | ಬಿಡುವೆನೆಂದೆಣಿಸಿದಯ ‖ ೪ ‖ ಒರೆ
ಯದಿರಸುರೆಯ ಮರುದ್ವತಿಸುತನನು | ತರಲೆನ್ನುತ ಪೋಗಿ | ಹರನೊಳ
ಗಪ ಜಯ ಪೊಂದುದ ಮರತೆಯ | ದೊರಕದು ಜಯ ನಿನಗೆ ‖ ೫ ‖ ಬಿಡ
ನಿನ್ನಯ ಪಿತನೊಡ ನಿನ್ನನು ನಾ|ಬಡಿದೊಯ್ಯುವೆನೆನುತ | ದುಡುಕಲು ಶೀಘ್ರ
ದೊಳಸ್ತ್ರವ ನೆಸಯಲು | ಕಡಿದದನುಂಗಿದಳು ‖ ೬ ‖ ಸುರಿಸಿದ ಶರಗಳನುಂ
ಗಲು ಕಾಣುತ | ಲರಸನು ಶ್ರೀ ಹರಿಯ | ಸ್ಮರಿಸಲು ಶಕ್ತಿಯು ದೊರಕಲು
ಹೂಡಿದ | ದುರಿಳೆಗೆ ಗುರಿಯಿಟ್ಟು ‖ ೭ ‖

ವಾರ್ಧಿಕ

ಕ್ಷೋಣಿ ಪಾಲಕಕೇಳು ಖಾತಿಯೊಳು ಜನಪ ವೈ | ಖಾನಸನು ಎಸೆದಿರುವ
ಬಾಣವದು ಶೀಘ್ರದಲಿ | ಧಾನವಿಯಬೆಂ ಬಿಡದೆ ಓಡಿಸಲು ಮೂಜಗವ
ತಿರುಗಿತಾ ನಿಲಲಾಗದೆ ‖ ಪ್ರಾಣವಂ ಉಳಿಪೆನೆನ್ನುತ ಬಂದು ನೃಪ ನಪದ | ಕಾ
ನತಾಗುತ ಜೀವದಾನವಂ ಪಡೆದುತಾ | ದಾನವಾಂತಕನ ವೃತ ಮಹಿಮೆ
ಯನು ಪೊಗಳುತ್ತ ಪೊರಟಳತಿ ಶೀಘ್ರದಿಂದ ‖ ೧ ‖

‖ ಸೌರಾಷ್ಟ್ರ - ತ್ರಿವುಡೆ ‖

ಸೋಲವಾದುದನುತ್ತ ಜೈಮಿನಿ | ಪಾಲ ದಂಡವ ಧರಿಸಿ ವೇಗದಿ | ಬಾಳ
ನೇತ್ರನ ತೆರದಿ ವಾಹನ‖ ವೇರಿ ಪೊರಟ ‖ ೧ ‖ ಬಂದು ಚಂಪಕ ಧಾರುಣಿಗೆ
ನಡೆ | ತಂದು ಗರ್ಜಿಸಲೆಲ್ಲ ಬೆದರಲು | ಇಂದಿರಾವರ ಭಕ್ತತಾ ತಡೆ‖ದೆಂದನಾ
ಗ ‖ ೨ ‖

‖ ಭೈರವಿ - ಅಷ್ಟ ‖

ತರಣಿನಂದನನೊ ನೀನೂ | ನಿಲ್ಲೆಲೊ ನೀನೆ| ದುರಕಾಗಿ ಬಂದೆ ಯೇನೊ| ದು
ತದೊಳಗನುಜೆ ಪಿಂ | ತಿರುಗಿದಳ್ನಿನಗೀಗ | ದೊರಕದು ಜಯ ಪೋಗೆಲಾ
‖ ೧ ‖

‖ ಶಂಕರಾಭರಣ ಪಟ್ಟಿ ‖

ತರಳ ಕೇಳು ಪಾಪ ಪುಣ್ಯ | ವರಿತು ಶಿಕ್ಷೆ ಕೊಡುವದೆನ್ನ | ನಿರತ ಕರ್ಮಜರ
ಡೀಗ ‖ ಶಿರವ ಕೊಂಬೆನು ‖ ೧ ‖ ಹರಿಯ ಭಕ್ತರಿಂಗೆ ಶಿಕ್ಷೆ ಕೊಡುವ ಪಾರು
ಪತ್ಯ ನಿನಗೆ | ಕರುಣಿಸಿದ ವರ್ಯಾರುಪೇಳು| ತೆರು ಬೇಗದೆ ‖ ೨ ‖

Scanned by CamScanner

॥ ಕೇದಾರ ಗೌಳ - ಅಷ್ಟ ॥

ಮೂರು ಮೂರ್ತಿಗಳಾಜ್ಞೆಯಂದದಿ ನಡೆದೆನು । ಧಾರುಣಿ ಪತಿಯೆ ನೀನು । ಮಾರಂತರಿದೋ ನಿನ್ನಗಾರು ಗೆಡಿಸಿಯೆನ್ನ । ಊರನ್ನು ತೋರಿಸುವೆ ॥ ೧ ॥

॥ ಕೇದಾರ ಗೌಳ - ಝುಂಪೆ ॥

ಮುನಿಸುತನಿಗಾಗಿ ಬಂದು । ಹಿಂದೊಮ್ಮೆ । ರಣದಲ್ಲಿ ಸೋತುನೊಂದು । ಕಣುಗಳಲಿಜಲವ ಸುರಿಸಿ । ಪೋದುದನು । ಎಣಿಸಿ ಮಾತಾಡೊ ಸಹಿಸಿ ॥ ೧ ॥ ಮೃಡ ಕೋಪದಿಂದಲೆಸ । ಬಂದು ಕೈ । ತಡಯಳುಳಿಸಿದೆಯೊತನ । ನುಡಿದು ಪಲವಿಲ್ಲವೆಂದು । ಶರದಿಂದ । ಹೊಡೆದನಾ ಕ್ಷಣದಿನಿಂದು ॥ ೨ ॥ ತರಣಿಜನ ಬಾಣಗಳನು । ನೃಪ ತನುಜ । ತರಿಯೆ ಕಾಣುತಲಿಯಮನು । ತಿರುಹಿ ದಂಡವತೆಗೆಯಲು । ಅಂಜುತ್ತ । ಹರಿಯನೆನೆದನು ಜವದೊಳು ॥ ಶ್ರೀರಮಾಧವ ಚಿನ್ಮಯೊ । ಯೊನ್ನೊಳಿಹ । ಕಾರುಣ್ಯವನು ತೊರೆದೆಯೊ । ಕ್ರೂರ ಅಂತಕನ ಕಣೆಯ । ಹತಿಯಿಂದ । ಪಾರುಗಾಣೆನು ನಿಶ್ಚಯ ॥ ೪ ॥

॥ ಕೇದಾರ ಗೌಳ - ಅಷ್ಟ ॥

ಮೊರೆಯನ್ನು ಕೇಳುತ ಲಾಕ್ಷಣ ಕಮಲಾಕ್ಷ । ಅರೆ ಕ್ಷಣ ದೈತರುತ । ಅರಸನ ಪಿಡಿದೆತ್ತಿ ರೌದ್ರದಿ ಮಾರ್ತಾಂಡ । ಶರಳನಿಗಿಂತೆಂದನು ॥ ೧ ॥ ಎಲೊ ಯಮನೆನ್ನಯ ಭಕ್ತರಿಗೀಪರಿ । ಬಲು ಕಷ್ಟ ವಿತ್ತಿಹೆಯ । ಸಲುಗೆಯುನಿನಗಾಯ್ತೆ । ಮರತೆಯಖುಷಿಯನು । ಎಳೆಯಲು ಪೋಗಿಹುದ ॥ ೨ ॥ ಕರಮುಗಿದೆಮನೆಂದ ಎನ್ನದೇನಪರಾಧ । ಅರಸಿಯ ಋತು ಭಂಗಗೈದ । ಅರಸನ ಶಿಕ್ಷೆಗೆ ಗುರಿಗೈಯ್ಸ ಲೋಸುಗ । ಹರಿತಂದೆ ನೀಕಡೆಗೆ ॥ ೩ ॥

ವಾರ್ಧಿಕ

ಭಾನುಸುತ ಕೇಳು ಮುರದಾನವನು ನಿರ್ಜರರ । ಶ್ರೇಣಿಯಂ ಪೀಡಿಸಲು ಸುರ ಪಾಲ ದೂರಿಡಲು । ನಾನೆ ಏಕಾದಶಿಯ ದಿನ ದೇವಿಯಾಗುದಿಸಿ ಕಾಪಾಡಿದುದ ಮರೆತಿರೆ ॥ ಈ ನೃಪನ ಪಾಪಹರಿದೆನ್ನ ಲೋಕವಸೇರ್ವ । ನೀ ನಿನ್ನು ಜನಪನಿಹ ವರೆಗೀ ಪುರದ ಒಂದು । ಪ್ರಾಣಿಯಂಶಿಕ್ಷಿಸದಿರೆನು ತೊರೆಯ ಯಮಧರ್ಮರಾಯ ನಿಂತೆಂದ ನಾಗ ॥ ೧॥

॥ ಸೌರಾಷ್ಟ - ತ್ರಿಪುಡೆ ॥

ಹರಿಯೆಕ್ಷಮಿಸಪರಾಧವನು ನೀ । ನರುಹಿದಂದದಿ ನಡೆವೆ ಮುಂದಕೆ । ಧರೆಯೊಳಿದು ಚಿರಕಾಲವಿರಲೆಂ । ದರುಹಿಪೋದ ॥ ೧ ॥ ಅನಿತರೊಳು ಜನ

ಪಾಲ ಶ್ರೀಹರಿ ಚಿನುಮಯನೆಂ ಪೊರೆಯೆಂದು ವಂದಿಸೆ। ಧನುಜಹರನಿಂತೆಂದನೃಪತಿಗೆ ॥ ವಿನಯದಿಂದ ॥ ೨ ॥ ಅರಸನಿನ್ನಿಂದೀ ವ್ರತವು ಬಲು। ಮರೆಯಿತ್ತೈಧರೆಯಲಿ ಮುಂದಕೆ । ವಿರಚಿಪರಿಗುತ್ತಮದ ಸ್ಥಳವನ್ನು ॥ ಗ್ರರುಣಿಸುವೆನು ॥ ೨ ॥ ಎಂದುಸುರೆ ವೈಖಾನಸನು ಆ । ನಂದದಿಂದಾರತಿಯ ಬೆಳಗಲು । ಇಂದಿರಾವರಕ್ಷೀರ ಶರದಿಗೆ ॥ಬಂದು ಸೇರ್ದ ॥ ೩ ॥ ಇಳೆಯ ಪಾಲಗೆ ಮುನಿಪ ಪೇಳಿದ। ಚೆಲುವ ಚರಿತೆಯ ಸರಿತ ತೆರದಲಿ। ಮೆರೆವಶರಪುರವಾಸವಿಷ್ಣೀ ॥ ಶ್ವರನದಯದಿ ॥ ೪ ॥ ಧಾರುಣಿಯೊಳ್ಪಿಸರ್ಾಂತ ಮಂಗಳ । ಊರಿಸನಿಹದೊಳಿರುತಿರುವಬೋ।ಳೂರಿನಲ್ಲಿಹ ವೈದ್ಯಕುಲ ದೋ॥ಗುರನೆನೆವರ ॥ ೭ ॥ ಸಾರಸುತನಾಗೀರ್ದ ವಿಶ್ವ।ಕುಮಾರ ನೊಲವಿನ ಸಹಜ ಮದ್ದುಕು । ಮಾರನಾನೀಕೃತಿಯ ಮೋದದಿ ॥ ವಿರಚಿಸಿದೆನು ॥ ೮ ॥ ಇರಬಹುದು ತಪ್ಪುಗಳು ಹಂಸವು। ಶರವ ತೊರೆಯುತ ದುಗ್ಧವನು ಸ್ವೀ । ಕರಿಪತೆರ ಓದುಗರು ಮನದಲಿ ॥ ಪರಿಗಣಿಸಿರಿ ॥ ೯ ॥

॥ ಮಂಗಲ ಪದ - ಏಕತಾಳ ॥

ಮಂಗಲ ಲಕ್ಷ್ಮೀ ಲೋಲನಿಗೆ । ಜಯ । ಮಂಗಲ ತ್ರೈಜಗದಿ । ಶ್ವರಗೆ । ಮಂಗಲ ದೀನೋದ್ಧಾರನಿಗೆ । ಮಂಗಲಂ ॥ ೧ ॥ ಅಂಗಜ ಪಿತ ಶ್ರೀ ರಂಗನಿಗೆ । ಜಯ । ಮಂಗಳ ಮೂರುತಿನರ ಹರಿಗೆ । ತುಂಗ ಪರಾಕ್ರಮಿ ಕೇಶವಗೆ । ಜಯ । ಗಂಗಾಧರ ಸಖ ಮಾಧವಗೆ ॥ ಮಂಗಲಂ ಜಯ ಮಂಗಲಂ ಶುಭ ಮಂಗಲಂ ॥ ೨ ॥

ಸಮಾಪ್ತಿ

Scanned by CamScanner